| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 20 ನಿ | ಕನ್ನಡ : ಬಾವಿಯಲ್ಲಿ ಚಂದ್ರ. (ಪುನರಾವರ್ತನೆ) | * ಕಥನ, ವಿವರಣೆ, ಪದಬಂಧ ಮತ್ತು ಒಗಟುಗಳನ್ನು ಆಲಿಸುವುದರ ಜೊತೆಗೆ ಅರ್ಥ ಮಾಡಿಕೊಳ್ಳುವುದು. | ಪದಬಂಧ ಮಿಂಚುಪಟ್ಟಿ | ಶಿಕ್ಷಕರು | ಪದಬಂಧಕ್ಕೆ ಸಂಬಂಧಿಸಿದಂತೆ ಮಿಂಚುಪಟ್ಟಿಗಳನ್ನು ತಯಾರಿಸಿ ಮಿಂಚುಪಟ್ಟಿಗಳಿಗನುಗುಣವಾಗಿ ಮಕ್ಕಳನ್ನು ತಂಡಗಳಾಗಿ ಮಾಡಿ ಪ್ರತಿ ತಂಡಕ್ಕೆ ಮಿಂಚುಪಟ್ಟಿಯನ್ನು ಕೊಟ್ಟು ತುಂಬಲು ಸಲಹೆ ನೀಡುವರು. | ಕನ್ನಡ ಕವನ–ಪುನರಾವರ್ತನೆ | * ಸಂವಾದ, ಚರ್ಚೆ ಹಾಗೂ ನಾಟಕಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು. | ಗ್ರಂಥಾಲಯದ ಪುಸ್ತಕ | ಶಿಕ್ಷಕರು | ಗ್ರಂಥಾಲಯದ ಪುಸ್ತಕವನ್ನು ಬಳಸಿಕೊಂಡು ಅದರಲ್ಲಿರುವ ಸರಳ ಕಥೆಯನ್ನು ನಾಟಕದ ರೂಪದಲ್ಲಿ ಅಭಿನಯಿಸುವರು. |
| | 20 ನಿ | | | | ಹಿರೇಮಣಿ | **ಸೂಚನೆ :** ಮಿಂಚುಪಟ್ಟಿ ತಯಾರಿಕೆಗೆ ಪಠ್ಯಪುಸ್ತಕದ 5ನೇ ಪುಟ ನೋಡುವರು. | | | | | ಅನಂತರ ಆ ನಾಟಕ ಅಭಿನಯದ ಬಗ್ಗೆ ಮಕ್ಕಳೊಂದಿಗೆ ಚರ್ಚಿಸುವರು. |
| | 40 ನಿ | ಕನ್ನಡ ಉಪಾಯಬಲ್ಲವನಿಗೆ ಅಪಾಯವಿಲ್ಲ. (ಪುನರಾವರ್ತನೆ) | * ಸ್ವರದಲ್ಲಿ ಸರಿಯಾದ ಏರಿಳಿತ ಮತ್ತು ಅಭಿನಯದ ಮೂಲಕ ಸರಳ ಕಥೆಗಳನ್ನು ವಿವರಿಸುವುದು. | ಗ್ರಂಥಾಲಯದಲ್ಲಿ ಲಭ್ಯವಿರುವ ಕಥೆ ಪುಸ್ತಕಗಳು | ಶಿಕ್ಷಕರು | ಮಕ್ಕಳಿಗೆ ಗ್ರಂಥಾಲಯದ ಪುಸ್ತಕಗಳಲ್ಲಿ ಓದಿದ ಸರಳ ಕಥೆಗಳನ್ನು ಅಭಿನಯದ ಮೂಲಕ ಹೇಳಲು ಸೂಚಿಸುವರು. ಅದರಂತೆ ಮಕ್ಕಳು ಸರಳ ಕಥೆಗಳನ್ನು ಸ್ವರಭಾರ ಏರಿಳಿತದೊಂದಿಗೆ ಹೇಳುವರು. | ಕನ್ನಡ ಸಂಗೊಳ್ಳಿ ರಾಯಣ್ಣ. (ಪುನರಾವರ್ತನೆ) | * ನಿರರ್ಗಳವಾಗಿ ಹಾಗೂ ಸಮಂಜಸವಾಗಿ ಮಾತನಾಡುವುದು.<br>* ಸನ್ನಿವೇಶ ಹಾಗೂ ಘಟನೆಗಳನ್ನು ವಿವರಿಸುವುದು. | ಆಶುಭಾಷಣಕ್ಕೆ ಸಂಬಂಧಿಸಿದಂತೆ ವಿಷಯ ಬರೆದ ಚೀಟಿಗಳು | ಹಿರೇಮಣಿ | ಮಕ್ಕಳಿಗೆ ಆಶುಭಾಷಣ ಸ್ಪರ್ಧೆ ಏರ್ಪಡಿಸುವರು.<br>**ಆಶುಭಾಷಣ ಸ್ಪರ್ಧೆ :** ಸ್ಥಳೀಯವಾಗಿ ಪ್ರಚಲಿತದಲ್ಲಿರುವ ಕೆಲವು ವಿಷಯಗಳನ್ನು ಸಣ್ಣ ಚೀಟಿಗಳಲ್ಲಿ ಬರೆದು ಒಂದು ಡಬ್ಬದಲ್ಲಿ ಹಾಕಿ ಒಂದೊಂದೇ ಮಗುವನ್ನು ಕರೆದು ಒಂದು ಚೀಟಿ ತೆಗೆದುಕೊಂಡು ಆ ವಿಷಯದ ಬಗ್ಗೆ ಮಾತನಾಡುವರು.<br>ಉದಾಹರಣೆ : ಹಸು, ತೆಂಗಿನ ಮರ, ನಾಯಿ ಇತ್ಯಾದಿ. |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **2ನೇ** | 20 ನಿ | **ಕನ್ನಡ**<br>**ಉಪಾಯ ಬಲ್ಲವನಿಗೆ ಅಪಾಯವಿಲ್ಲ** | * ಸ್ವರದಲ್ಲಿ ಸರಿಯಾದ ಏರಿಳಿತ ಮತ್ತು ಅಭಿನಯದ ಮೂಲಕ ಸರಳ ಕಥೆಗಳನ್ನು ವಿವರಿಸುವುದು. | ಗ್ರಂಥಾಲಯದ ಪುಸ್ತಕಗಳು | ಹಿರೇಮಣಿ | ಹಿಂದಿನ ಅವಧಿಯಲ್ಲಿ ಹೇಳಲಾದ ಕಥೆಗಳನ್ನು ಮಕ್ಕಳು ಸ್ವರಭಾರ ಏರಿಳಿತದೊಂದಿಗೆ ಹೇಳುವರು. | **ಕನ್ನಡ**<br>**ಮಲೆನಾಡ ಸಿರಿ. (ಪುನರಾವರ್ತನೆ)** | * ಲೇಖನ ಚಿಹ್ನೆಗಳನ್ನು ವಾಕ್ಯಗಳಲ್ಲಿ ಬಳಸುವುದು. | * ವಾಕ್ಯಗಳ ಮಿಂಚುಪಟ್ಟಿಗಳು | ಶಿಕ್ಷಕರು | ಪ್ರತಿ ಮಗುವಿಗೆ ಒಂದು ಅಥವ ಎರಡು ವಾಕ್ಯಗಳ ಮಿಂಚು ಪಟ್ಟಿಯನ್ನು ಕೊಟ್ಟು ಸೂಕ್ತ ಲೇಖನ ಚಿನ್ಹೆ ಹಾಕಲು ತಿಳಿಸುವರು. |
| | 20 ನಿ | | | | ಶಿಕ್ಷಕರು | ನಂತರ ಮಕ್ಕಳಿಗೆ ತಿಳಿದಿರುವ ಸರಳ ಕಥೆಗಳನ್ನು ಪ್ರತಿ ಮಗುವಿನಿಂದ ಹೇಳಿಸುವರು. | | | | ಹಿರೇಮಣಿ | ಮಕ್ಕಳು ಲೇಖನ ಚಿಹ್ನೆ ಹಾಕಿದ ನಂತರ ಮಕ್ಕಳು ತಮಗೆ ಕೊಟ್ಟ ಮಿಂಚು ಪಟ್ಟಿಯನ್ನು ಬಿಟ್ಟು ಬೇರೆ ವಾಕ್ಯದ ಮಿಂಚುಪಟ್ಟಿ ಪಡೆದು ಅದಕ್ಕೆ ಲೇಖನ ಚಿನ್ಹೆ ಹಾಕುವರು. |
| | 40 ನಿ | **ಕನ್ನಡ**<br>**ಬುದ್ಧಿವಂತ ಮಂತ್ರಿ (ಪುನರಾವರ್ತನೆ)** | * ಸರಿಯಾದ ರೂಪ ಅನುಕ್ರಮದೊಂದಿಗೆ ಅಕ್ಷರಗಳು ಹಾಗೂ ಪದಗಳ ಮಧ್ಯೆ ಸೂಕ್ತ ಜಾಗದೊಂದಿಗೆ ಬರೆಯುವುದು. | ಗದ್ಯಭಾಗವನ್ನು ಬರೆದ ಡ್ರಾಯಿಂಗ್ ಹಾಳೆ | ಶಿಕ್ಷಕರು | ಬುದ್ಧಿವಂತ ಮಂತ್ರಿ ಪಾಠವನ್ನು ಡ್ರಾಯಿಂಗ್ ಹಾಳೆಯ ಮೇಲೆ ಪದಗಳ ಮಧ್ಯೆ ಸೂಕ್ತ ಜಾಗಬಿಡದೆ ಬರೆದು ಮಕ್ಕಳಿಗೆ ಕಾಣುವಂತೆ ನೇತುಹಾಕಿ ಈ ಗದ್ಯಭಾಗವನ್ನು ಪದಗಳ ನಡುವೆ ಸೂಕ್ತ ಜಾಗವನ್ನು ಬಿಟ್ಟು ಬರೆಯುವಂತೆ ಸೂಚಿಸುವರು.<br>ಅದರಂತೆ ಮಕ್ಕಳು ಬರೆಯುವರು. | **ಜೀವನ ವಿಜ್ಞಾನ : ಸಮಯ ಪಾಲನೆ** | * ಸಮಯದ ಮಹತ್ವ ಮತ್ತು ಸಮಯ ಪ್ರಜ್ಞೆ ಮೂಡಿಸುವುದು. | ಗ್ರಂಥಾಲಯದ ಪುಸ್ತಕಗಳು | ಶಿಕ್ಷಕರು | ಸಮಯ ಪ್ರಜ್ಞೆಯ ಬಗ್ಗೆ ಮಕ್ಕಳಿಗೆ ಅನೇಕ ಉದಾಹರಣೆ ಅಥವ ಕಥೆಗಳನ್ನು ಹೇಳುತ್ತಾ ಮಕ್ಕಳಲ್ಲಿ ಸಮಯದ ಮಹತ್ವ ಮತ್ತು ಸಮಯ ಪ್ರಜ್ಞೆಯ ಬಗ್ಗೆ ಹೇಳುವರು. |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 10 ನಿ | ಗಣಿತ<br>ವ್ಯವಕಲನ | * ದಶಕ ತೆಗೆದುಕೊಳ್ಳದೆ ಮತ್ತು ದಶಕ ತೆಗೆದುಕೊಂಡು ಮೂರು ಸಂಖ್ಯೆಯಿಂದ ವ್ಯವಕಲನ ಮಾಡುವುದು. | ಹಾಡು | ಶಿಕ್ಷಕರು | ಮಕ್ಕಳನ್ನು ವೃತ್ತಾಕಾರವಾಗಿ ಕೂಡಿಸಿಕೊಂಡು ಚೈತನ್ಯ ಕೈಪಿಡಿ 1ರಲ್ಲಿನ "ನಮ್ಮದವ್ವ ಐದುಗುಬ್ಬಿ ಚಿಂವ್ ಚಿಂವ್ ಗುಟ್ಟುತ್ತಿತ್ತ."<br>ಅದರಲಿ 1 ಹಾರಿ ಹೋಗಿ 4 ಉಳಿದಿತ್ತ ಎಂಬ ವ್ಯವಕಲನದ ಗೀತೆಯನ್ನು ಅಭಿನಯದೊಂದಿಗೆ ಹೇಳಿಕೊಡುವರು. | | | | | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ. |
| | 50 ನಿ | | | ಸ್ಥಾನಬೆಲೆ ಪಟ್ಟಿ<br>ಸಂಖ್ಯೆಗಳ ಮಿಂಚುಪಟ್ಟಿ | ಶಿಕ್ಷಕರು | * 900ರಲ್ಲಿ 567ನ್ನು ಕಳೆಯುವುದು. ಈ ಸಮಸ್ಯೆಯನ್ನು ಬಿಡಿಸಲು ಪಠ್ಯಪುಸ್ತಕದ ಪುಟಸಂಖ್ಯೆ 59ರಲ್ಲಿ ಇರುವಂತೆ ಹಂತ ಹಂತವಾಗಿ ಬಿಡಿಸಿ ತೋರಿಸುವರು.<br>ಹಾಗೂ ನಂತರ ಪುಟ 70 ಮತ್ತು 71ರಲ್ಲಿರುವಂತೆ ಸಂಕ್ಷಿಪ್ತರೂಪದ ವ್ಯವಕಲನ ಕ್ರಿಯೆಯನ್ನು ಹಂತ ಹಂತವಾಗಿ ವಿವರವಾಗಿ ಮಕ್ಕಳಿಗೆ ತಿಳಿಸಿಕೊಡುವರು. | | | | | |
| | 20 ನಿ | | | | ಶಿಕ್ಷಕರು | ಈಗಾಗಲೇ ಕಲಿತಿರುವ ಪಠ್ಯದ ಮುಖ್ಯಾಂಶಗಳು ಪುನಃ ಮತ್ತೊಮ್ಮೆ ಪುನರಾವರ್ತನೆಯಾಗಲು ಪೂರಕವಾಗುವಂತೆ ಕೆಲವು ಚಿಕ್ಕ ಸಮಸ್ಯೆಗಳನ್ನು ಬಿಡಿಸುವ ಮೂಲಕ ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡುವರು. | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4ನೇ | 10 ನಿ | ಪರಿಸರ ಅಧ್ಯಯನ<br>ವಸ್ತುಗಳ ಗುಣಗಳು ಮತ್ತು ಸ್ಥಿತಿಗಳು | * ನಮ್ಮ ಸುತ್ತಲಿನ ವಸ್ತುಗಳನ್ನು ಗುಣಗಳ ಆಧಾರದ ಮೇಲೆ ಗುರುತಿಸುವರು.<br>* ವಸ್ತುಗಳ ಮೂರು ಸ್ಥಿತಿಗಳನ್ನು ತಿಳಿಯುವರು.<br>* ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ವಸ್ತು ಬದಲಾಗಬಲ್ಲದು ಎಂಬುದನ್ನು ಅರಿಯುವರು. | ಚೈತನ್ಯ–I<br>ಕೈಪಿಡಿ | ಶಿಕ್ಷಕರು | ಶಿಕ್ಷಕರು ಮಕ್ಕಳಿಗೆ<br>ರೇಲ ರೇಲ ರೇಲ ರೇಲ<br>ರೇಲ ರೇಲ ರೇಲ<br>ಜುಮಕ ಜುಮಕ ಜುಮಕ ಜುಂ<br>ಎಂಬ ಗೀತೆ ಹೇಳಿಕೊಡುವರು. | | | | | 5ನೇ ತರಗತಿಯ 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ. |
| | 50 ನಿ | | | ಹೋಳೆಯುವ ಮತ್ತು ಹೊಳೆಯದ ವಸ್ತುಗಳು<br>ಹಗುರ ಮತ್ತು ಭಾರವಿರುವ ವಸ್ತುಗಳು<br>ಪಾತ್ರೆ, ನೀರು, ಕಲ್ಲು, ಎಲೆ | ಶಿಕ್ಷಕರು | ನಾವು ಉಪಯೋಗಿಸುವ ವಸ್ತುಗಳು ವಿವಿಧ ವಸ್ತುಗಳಿಂದ ಮಾಡಲ್ಪಟ್ಟಿದ್ದು ಚಿತ್ರದಲ್ಲಿ ವಸ್ತುಗಳ ಹೆಸರು ಮತ್ತು ಅವುಗಳು ಯಾವುದರಿಂದ ಮಾಡಲ್ಪಟ್ಟಿವೆ ಎಂಬುದನ್ನು ತಿಳಿಸುವರು.<br>ನಂತರ ಹೊಳೆಯುವ ಮತ್ತು ಹೊಳೆಯದ ವಸ್ತುಗಳ ಪಟ್ಟಿ ಮಾಡಿಸುವರು.<br>ಅನಂತರ ಹಗುರವಾದ ವಸ್ತುಗಳು ಮತ್ತು ಭಾರವಾದ ವಸ್ತುಗಳನ್ನು ಪಟ್ಟಿ ಮಾಡಿಸುವರು.<br>ನಂತರ ನೀರಿನಲ್ಲಿ ತೇಲುವ ಮತ್ತು ಮುಳುಗುವ ವಸ್ತುಗಳನ್ನು ಪಟ್ಟಿ ಮಾಡಿಸುವುದರ ಮೂಲಕ ಇವುಗಳ ಬಗ್ಗೆ ಸವಿವರವಾಗಿ ತಿಳಿಸಿಕೊಡುವರು. | | | | | |
| | 20 ನಿ | | | | ಶಿಕ್ಷಕರು | ಪಠ್ಯದ ಮುಖ್ಯಾಂಶಗಳು ಪುನರಾವರ್ತನೆಯಾಗಲು ಪೂರಕವಾಗುವಂತೆ ಪ್ರಶ್ನೆಗಳನ್ನು ಕೇಳುವ ಮೂಲಕ ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡುವರು. | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 40 ನಿ | ಕನ್ನಡ<br>ಬುದ್ಧಿವಂತ ಮಂತ್ರಿ ಪುನರಾವರ್ತನೆ | * ಸರಿಯಾದ ರೂಪ ಅನುಕ್ರಮದೊಂದಿಗೆ ಅಕ್ಷರಗಳು ಹಾಗೂ ಪದಗಳ ಮಧ್ಯೆ ಸೂಕ್ತ ಜಾಗದೊಂದಿಗೆ ಬರೆಯುವುದು. | ಪ್ರಶ್ನೆಗಳನ್ನು ಬರೆದ ಡ್ರಾಯಿಂಗ್ ಹಾಳೆ | ಹಿರೇಮಣಿ | ಬುದ್ಧಿವಂತ ಮಂತ್ರಿಪಾಠದಿಂದ ಕೆಲವು ಪ್ರಶ್ನೆಗಳನ್ನು ಮತ್ತು ಭಾಷಾಭ್ಯಾಸಕ್ಕೆ ಸಂಬಂಧಿಸಿದ ಚಟುವಟಿಕೆ ಅಥವಾ ಪ್ರಶ್ನೆಗಳನ್ನು ಒಂದು ಡ್ರಾಯಿಂಗ್ ಹಾಳೆಯ ಮೇಲೆ ಬರೆದು ಅವುಗಳಿಗೆ ಉತ್ತರ ಬರೆಯಲು ತಿಳಿಸುವರು.<br>**ಸೂಚನೆ :** ಅಕ್ಷರಗಳು ಮತ್ತು ಪದಗಳ ನಡುವೆ ಸೂಕ್ತ ಜಾಗ ಬಿಡಲು ತಿಳಿಸುವರು. | ಕನ್ನಡ<br>ವ್ಯಾಕರಣ ಪುನರಾವರ್ತನೆ | ವ್ಯಾಕರಣಗಳ ಬಗ್ಗೆ ಪುನರ್ಬಲನ | ಸ್ವರ ಮತ್ತು ವ್ಯಂಜನ ಪದಗಳ ಮಿಂಚು ಪಟ್ಟಿಗಳು | ಶಿಕ್ಷಕರು | ಸ್ವರ ಮತ್ತು ಸ್ವರದ ವಿಧಗಳು. ವ್ಯಂಜನ ಮತ್ತು ವ್ಯಂಜನದ ವಿಧಗಳು, ಸಂಯುಕ್ತಾಕ್ಷರಗಳು ಮತ್ತು ಸಂಯುಕ್ತಾರಗಳ ವಿಧಗಳು ಹಾಗೂ ವಚನಗಳ ಬಗ್ಗೆ ಪುನರ್ಬಲನ ಚಟುವಟಿಕೆಗಳನ್ನು ಮಾಡಿಸುವರು. |
| | 05 ನಿ | ಕನ್ನಡ<br>ನಿಯಮಪಾಲನೆ : ಪುನರಾವರ್ತನೆ | * ರಸ್ತೆ ಚಿನ್ಹೆಗಳು ಮತ್ತು ಸೂಚನಾ ಫಲಕಗಳಲ್ಲಿನ ಸರಳ ಸೂಚನೆಗಳನ್ನು ಓದುವುದು. | ಮಿಂಚು ಪಟ್ಟಿಗಳು | ಶಿಕ್ಷಕರು | ರಸ್ತೆಯ ಸೂಚನಾ ಫಲಕಗಳ ಚಿನ್ಹೆಗಳನ್ನು ಬರೆದ ಮಿಂಚುಪಟ್ಟಿಗಳನ್ನು ಕೊಟ್ಟು ಅವುಗಳ ಸೂಚನೆಗಳನ್ನು ಬರೆಯಲು ತಿಳಿಸುವರು. | ಜೀವನ ವಿಜ್ಞಾನ<br>ಪ್ರಸಂಶೆ | ಬೇರೆಯವರು ಮಾಡಿದ ಕೆಲಸಗಳನ್ನು ಪ್ರಸಂಶೆ ಮಾಡುವುದು. | | ಹಿರೇಮಣಿ | ಪ್ರಸಂಶೆ ಬಗ್ಗೆ ಹಲವಾರು ಉದಾಹರಣೆಗಳನ್ನು ಕೊಡುತ್ತಾ ಮೆಚ್ಚಿಗೆ ವ್ಯಕ್ತಪಡಿಸುವರು.<br>* ಪರೀಕ್ಷೆಯಲ್ಲಿ ಉತ್ತಮ ಗ್ರೇಡ್ ಪಡೆದ ವಿದ್ಯಾರ್ಥಿಗಳನ್ನು ಪ್ರಸಂಶಿಸುವರು. |
| | 35 ನಿ | | | ಸೂಚನ ಫಲಕಗಳ ಮಿಂಚು ಪಟ್ಟಿಗಳು | ಹಿರೇಮಣಿ | ಶಿಕ್ಷಕರು ಕೊಟ್ಟ ಸೂಚನಾಫಲಕಗಳಲ್ಲಿ ಚಿನ್ಹೆ ಯಾವ ಸೂಚನೆಯನ್ನು ತಿಳಿಸುತ್ತದೆ ಎಂಬುದನ್ನು ತಪ್ಪಿಲ್ಲದೆ ಬರೆಯುವರು. | | | | ಶಿಕ್ಷಕರು | * ಸಮಯಪಾಲನೆ ಮಾಡುವ ವಿದ್ಯಾರ್ಥಿಗಳನ್ನು ಪ್ರಸಂಶಿಸುವರು.<br>ಇತ್ಯಾದಿ ಉದಾಹರಣೆಗಳನ್ನು ಕೊಡುತ್ತಾ ಮಕ್ಕಳಲ್ಲಿ ಉತ್ತಮ ಗುಣಗಳನ್ನು ಬೆಳೆಸಿಕೊಳ್ಳಲು ಹೇಳುವರು. |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **2ನೇ** | 10 ನಿ | **ಜೀವನ ವಿಜ್ಞಾನ**<br>**ಬೌದ್ಧಿಕ ಆಟ (ಏಕಾಗ್ರತೆ)** | ಮಕ್ಕಳಲ್ಲಿ ಏಕಾಗ್ರತೆ ಬೆಳೆಸುವುದು. | | ಶಿಕ್ಷಕರು | ಮಕ್ಕಳಿಗೆ "ಹೌದು, ಇಲ್ಲ" ಆಟ ಆಡಿಸುವರು. | **ಗಣಿತ**<br>**ಕೋನಗಳ ವಿಧಗಳು ಮತ್ತು ರಚನೆ** | * ಕೋನಗಳ ರಚನೆ ಮಾಡುವ ಕೌಶಲ ಬೆಳೆಸುವುದು.<br>* ಕೋನಮಾಪಕ ಹಾಗೂ ಸ್ಕೇಲ್ ಬಳಸುವ ಕೌಶಲ ಬೆಳೆಸುವುದು. | ಮಿಂಚು ಪಟ್ಟಿಗಳು | ಹಿರೇಮಣಿ | ಲಘುಕೋನ, ಲಂಬಕೋನ, ವಿಶಾಲಕೋನ, ಸರಳಕೋನ ಮುಂತಾದವುಗಳ ಮಿಂಚುಪಟ್ಟಿಗಳನ್ನು ಬೇರ್ಪಡಿಸುವರು. |
| | 30 ನಿ | | | | ಶಿಕ್ಷಕರು | **ಆಟದ ನಿಯಮ ಮತ್ತು ವಿಧಾನ :** ಹಿರೇಮಣಿ ಯಾವುದಾದರೂ ಒಂದು ವಾಕ್ಯವನ್ನು ಹೇಳಿದಾಗ ಆ ವಾಕ್ಯಕ್ಕೆ ಸಂಬಂಧಿಸಿದಂತೆ ಮಕ್ಕಳು ಹೌದು ಅಥವಾ ಅಲ್ಲ ಎನ್ನಬೇಕು. ಆದರೆ ತಲೆ ಮಾತ್ರ ಮಕ್ಕಳು ಹೇಳಿದ್ದಕ್ಕೆ ವಿರುದ್ಧವಾಗಿ ಚಲನೆಯಾಗಬೇಕು. ಉದಾಹರಣೆ : ಕೋತಿಗೆ ಬಾಲ ಇದೆಯೇ ? ಎಂದಾಗ ಮಕ್ಕಳು ಹೌದು ಎಂದು ಬಾಯಲ್ಲಿ ಉಚ್ಚರಿಸುತ್ತಾ ತಲೆಯನ್ನು ಅಡ್ಡಲಗಿ ಚಲಿಸುತ್ತ ತಲೆಯ ಸನ್ನೆ ಇಲ್ಲ ಎಂದು ವಿರುದ್ಧವಾಗಿ ತೋರಿಸಬೇಕು. ಬಾಯಲ್ಲಿ ಹೌದು ಎಂದು ಹೇಳಿ ತಲೆಯ ಸನ್ನೆಯೂ ಹೌದು ಎಂದು ಮೇಲೆ ಕೆಳಗೆ ಆಡಿಸುತ್ತಿದ್ದರೆ ಸೋತ ಹಾಗೆ ಈ ಆಟ ಆಡಿಸುವರು. | | | ಸ್ಕೇಲು, ಕೋನ ಮಾಪಕ, ಕೈವಾರ | ಹಿರೇಮಣಿ | ಸ್ಕೇಲು, ಕೈವಾರ, ಪೆನ್ಸಿಲ್‌ಗಳನ್ನು ಬಳಸಿ $15^0$, $30^0$, $45^0$, $60^0$, $70^0$, $80^0$, $75^0$, $35^0$ ಮುಂತಾದ ಲಘುಕೋನಗಳನ್ನು ರಚಿಸುವ ವಿಧಾನವನ್ನು ಮಕ್ಕಳಿಗೆ ತಿಳಿಸುವರು.<br>ಮಾದರಿಯಾಗಿ ಶಿಕ್ಷಕರು ಎರಡು ಕೋನಗಳನ್ನು ಕಪ್ಪು ಹಲಗೆಯ ಮೇಲೆ ಬಿಡಿಸಿ ಮಕ್ಕಳಿಗೆ ಬರೆಯಲು ತಿಳಿಸುವರು. |
| | 40 ನಿ | | | | ಶಿಕ್ಷಕರು | ಹೌದು ಅಲ್ಲ ಆಟ ಆಡಿಸುವರು | **ಜೀವನ ವಿಜ್ಞಾನ**<br>**ಏಕಾಗ್ರತೆ (ಬೌದ್ಧಿಕ ಆಟಗಳು)** | * ಮಕ್ಕಳಲ್ಲಿ ಏಕಾಗ್ರತೆ ಬೆಳೆಸುವುದು. | | ಶಿಕ್ಷಕರು | ಹೌದು ಅಲ್ಲ ಆಟದಲ್ಲಿ ಪಾಲ್ಗೊಳ್ಳುವರು. |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ಕಲಿಕಾ ಘಟಕ / ಉಪ ಘಟಕ | ಕಲಿಕಾ ಉದ್ದೇಶ | ಕಲಿಕೋಪಕರಣಗಳು / ಸಂಪನ್ಮೂಲ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಕಲಿಕಾ ಘಟಕ / ಉಪ ಘಟಕ | ಕಲಿಕಾ ಉದ್ದೇಶ | ಕಲಿಕೋಪಕರಣಗಳು / ಸಂಪನ್ಮೂಲ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 15 ನಿ | ಪರಿಸರ ಅಧ್ಯಯನ<br>ವಸ್ತುಗಳ ಗುಣಗಳು ಮತ್ತು ಸ್ಥಿತಿಗಳು | * ನಮ್ಮ ಸುತ್ತಲಿನ ವಸ್ತುಗಳನ್ನು ಗುಣಗಳ ಆಧಾರದ ಮೇಲೆ ಗುರುತಿಸುವರು.<br>* ವಸ್ತುಗಳ ಮೂರು ಸ್ಥಿತಿಗಳನ್ನು ತಿಳಿಯುವರು.<br>* ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ವಸ್ತು ಬದಲಾಗುವುದು ಎಂಬುದನ್ನು ಅರಿಯುವರು. | ಹೆಸರಿನ ಚೀಟಿ | ಶಿಕ್ಷಕರು | **ನಾನ್ಯಾರು ಹೇಳು ಆಟ :**<br>ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಅವರಲ್ಲಿ ಒಬ್ಬ ಮಗುವನ್ನು ಮುಂದೆ ಕರೆದು ಅವನ ಬೆನ್ನಿಗೆ ಒಂದು ಹೆಸರು ಬರೆದು (ಹಾಲು, ಆನೆ) ಅವನಿಗೆ ಆ ವಸ್ತುವಿನ ಅಥವಾ ಆ ಪ್ರಾಣಿಯ ವರ್ತನೆಗಳ ಬಗ್ಗೆ ಸುಳಿವು ನೀಡುತ್ತಾ ಆ ವಸ್ತು ಅಥವಾ ಪ್ರಾಣಿ ಹೆಸರನ್ನು ಆ ಮಗುವಿನಿಂದ ಹೇಳಿಸಿ ಇದೇ ರೀತಿ ಆಟ ಮುಂದುವರಿಸುವರು. | | | | | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ |
| | 45 ನಿ | | | ಸಣ್ಣಕಲ್ಲುಗಳು<br>ಬೆಂಕಿಪಟ್ಟಣ<br>ನೀರು ಹಾಲು<br>ಊದುಬತ್ತಿ | ಶಿಕ್ಷಕರು | ವಸ್ತುವಿನ ಮೂರು ಸ್ಥಿತಿಗಳಾದ ಘನ, ದ್ರವ, ಅನಿಲ ಇವುಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ನೀಡುವರು. ನಂತರ ಈ ಮೂರು ಸ್ಥಿತಿಗಳ ಗುಣಲಕ್ಷಣಗಳು ಹಾಗೂ ಉದಾಹರಣೆಯ ಸಮೇತ ಸವಿವರವಾಗಿ ತಿಳಿಸಿಕೊಡುವರು. | | | | | |
| | 20 ನಿ | | | | ಶಿಕ್ಷಕರು | ಪಠ್ಯದ ಮುಖ್ಯಾಂಶಗಳು ಪುನರಾವರ್ತನೆಯಾಗಲು ಪೂರಕವಾಗುವಂತೆ ಮಕ್ಕಳಿಗೆ ಸರಳ ಪ್ರಶ್ನೆಗಳನ್ನು ಕೇಳುವ ಮೂಲಕ ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡುವರು. | | | | | |

(Diagonal note across the Class 5 columns: 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ)

| ಅವಧಿ | ಸಮಯ ನಿಮಿಷ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕ | ಸಾಮರ್ಥ್ಯಗಳು | ಬೋಧನೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕ | ಸಾಮರ್ಥ್ಯಗಳು | ಬೋಧನೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4ನೇ | 10 ನಿ | ಗಣಿತ ವ್ಯವಕಲನ | * ದಶಕ ತೆಗೆದುಕೊಳ್ಳದೆ ಮತ್ತು ದಶಕ ತೆಗೆದುಕೊಂಡು ಮೂರು ಸಂಖ್ಯೆಯಿಂದ ವ್ಯವಕಲನ ಮಾಡುವರು. | ಸಂಖ್ಯೆಗಳ ಮಿಂಚುಪಟ್ಟಿ | ಶಿಕ್ಷಕರು | ನೆಲದ ಮೇಲೆ ಒಂದು ವೃತ್ತವನ್ನು ಹಾಕಿ ಅದರಲ್ಲಿ ಎಂಟು ಮಕ್ಕಳನ್ನು ನಿಲ್ಲಿಸಿ 4 ಮಕ್ಕಳನ್ನು ಹೊರಗೆ ಕಳುಹಿಸಿ ಈಗ ವೃತ್ತದಲ್ಲಿರುವ ಮಕ್ಕಳೆಷ್ಟು ಎಂದು ಪ್ರಶ್ನಿಸಿ ಉತ್ತರ ಪಡೆದು ಇದೇ ರೀತಿ ಆಟ ಆಡಿಸುತ್ತಾ ವ್ಯವಕಲನ ಕ್ರಿಯೆಗೆ ಮಕ್ಕಳನ್ನು ಅಣಿಗೊಳಿಸುವರು. | | | | | 5ನೇ ತರಗತಿಯ 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ. |
| | 30 ನಿ | | | | ಶಿಕ್ಷಕರು | ನಂತರ ಮಕ್ಕಳಿದ ಪಠ್ಯಪುಸ್ತಕದ ಪುಟಸಂಖ್ಯೆ 71 & 72ರಲ್ಲಿ ಬರುವ ಅಭ್ಯಾಸದಲ್ಲಿನ ವ್ಯವಕಲನ ಮಾಡಿಸುವರು. ಚಟುವಟಿಕೆಯಲ್ಲಿನ 1 ಲೆಕ್ಕವನ್ನು ಮಾದರಿಯಾಗಿ ಮಾಡಿ ತೋರಿಸಿ ಮಕ್ಕಳಿಂದ ಮಾಡಿಸುವರು.<br>* 278<br>− 139<br>139 | | | | | |
| | 40 ನಿ | ಪಾ.ಅ.ಅ.ಕಾ ಆಲ್ಬಂ ತಯಾರಿ | * ಗರಿಗಳ ಆಲ್ಬಂ ತಯಾರಿ ಅರಿಯುವರು. | ಎಲೆಗಳು, ಗರಿಗಳು, ಅಂಟು | ಶಿಕ್ಷಕರು | ಶಿಕ್ಷಕರ ಮುಂದಾಳತ್ವದಲ್ಲಿ ಮಕ್ಕಳು ತಮ್ಮ ಶಾಲಾ ಪರಿಸರದ ಸುತ್ತಮುತ್ತಲೂ ಸುಲಭವಾಗಿ ಸಿಗುವಂತಹ ವಿವಿಧ ಬಗೆಯ ಎಲೆಗಳು, ಪಕ್ಷಿಗಳ ಗರಿಗಳನ್ನು ಸಂಗ್ರಹಿಸಿ ತಂದು ತಮ್ಮ ತರಗತಿಯಲ್ಲಿ ಜೋಪಾನವಾಗಿ ಇಡುವರು. | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 15 ನಿ | ಕನ್ನಡ : ನಿಯಮಪಾಲನೆ | * ರಸ್ತೆ ಚಿಹ್ನೆಗಳು ಮತ್ತು ಸೂಚನಾ ಫಲಕಗಳಲ್ಲಿನ ಸರಳ ಸೂಚನೆಗಳನ್ನು ಓದುವುದು. | | ಶಿಕ್ಷಕರು | ನಿಯಮ ಪಾಲನೆ ಗದ್ಯಭಾಗದ ಅಭ್ಯಾಸದ ಹಾಳೆಯಲ್ಲಿರುವ ಅಭ್ಯಾಸದ ಚಟುವಟಿಕೆಗಳನ್ನು ಒಂದು ಡ್ರಾಯಿಂಗ್ ಹಾಳೆಯಲ್ಲಿ ಬರೆದು ನೇತು ಹಾಕಿ ಆ ಚಟುವಟಿಕೆಗಳನ್ನು ಬರೆಯಲು ತಿಳಿಸುವರು. | ಕನ್ನಡ : ಜಲಪಾತ | * ಅಪರಿಚಿತ ಸನ್ನಿವೇಶಗಳನ್ನು ಸಂಭಾಷಣೆ ಸಂವಾದ ಚಟುವಟಿಕೆಗಳ ಮೂಲಕ ಅರ್ಥಮಾಡಿಕೊಳ್ಳುವುದು. | ಪ್ರೇಕ್ಷಣೀಯ ಸ್ಥಳಗಳ ಚಿತ್ರಪಟ | ಹಿರೇಮಣಿ | ಶಾಲಾ ಶೈಕ್ಷಣಿಕ ಪ್ರವಾಸದ ಅನುಭವದಲ್ಲಿ ಕಂಡು ಬರುವ ಅಂಶಗಳನ್ನು ಪಟ್ಟಿ ಮಾಡಿಸುವರು. |
| | | | | | | | | | | ಶಿಕ್ಷಕರು | ಮೇಲೆ ತಯಾರಿಸಿದ ಪಟ್ಟಿಯ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಆ ಅಂಶಗಳ ಬಗ್ಗೆ ಚರ್ಚಿಸುವರು. |
| | 25 ನಿ | | | | ಹಿರೇಮಣಿ | **ಚಟುವಟಿಕೆಗಳು** : 1. ಹೊಂದಿಸಿ ಬರೆಯಿರಿ.<br>2. ವಿರುದ್ಧಾರ್ಥಕ ಬರೆಯಿರಿ.<br>3. ಭಾಷಾಭ್ಯಾಸದ ಚಟುವಟಿಕೆಗಳನ್ನು ಮಾಡಿಸುವರು. | | | | | |
| | 20 ನಿ | ಕನ್ನಡ : ಗಗನ ಗುಡಿ (ಕವನ) | * ಪದ್ಯವನ್ನು ಆಲಿಸಿದ ನಂತರ ಏನು? ಏಕೆ? ಎಂಬ ಪ್ರಶ್ನೆಗಳಿಗೆ ಉತ್ತರಿಸುವ ಸಾಮರ್ಥ್ಯ ಬೆಳೆಸುವುದು. | | ಶಿಕ್ಷಕರು | ಯಾವುದಾದರೂ ಸರಳ ಕಥೆ ಹೇಳಿ ಆ ಕಥೆಯ ಬಗ್ಗೆ ಸರಳ ಪ್ರಶ್ನೆಗಳನ್ನು ಏನು ? ಏಕೆ ? ಎಂಬ ಪ್ರಶ್ನೆಗಳನ್ನು ಕೇಳಿ ಮಕ್ಕಳಿಂದ ಉತ್ತರ ಪಡೆಯುವರು. | ಜೀವನ ವಿಜ್ಞಾನ : ಹವ್ಯಾಸ | * ಜೀವನದಲ್ಲಿ ಉತ್ತಮ ಹವ್ಯಾಸಗಳು ಯಾವುವು ಹಾಗೂ ಅವುಗಳನ್ನು ರೂಡಿಸಿಕೊಳ್ಳುವ ಸಾಮರ್ಥ್ಯ ಬೆಳೆಸುವುದು. | ನೀರು ಸಂಗ್ರಹಿಸಲು ಬಿಂದಿಗೆ | ಹಿರೇಮಣಿ | ಶಾಲಾ ಕೈ ತೋಟವನ್ನು ಸ್ವಚ್ಛವಾಗಿಡುವುದು ಗಿಡಗಳ ಆರೈಕೆ ಅಂದರೆ ನೀರು ಗೊಬ್ಬರ ಹಾಕಲು ತಿಳಿಸುವರು. |
| | 20 ನಿ | | | | ಹಿರೇಮಣಿ | ಚಟುವಟಿಕೆ ಮುಂದುವರೆಸುವರು. | | | | ಶಿಕ್ಷಕರು | ಶಿಕ್ಷಕರು ಕೊಟ್ಟ ಸಲಹೆಯಂತೆ ಶಾಲಾ ಕೈತೋಟದಲ್ಲಿ ಗಿಡಗಳ ಆರೈಕೆಯಲ್ಲಿ ತೊಡಗುವರು. |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **2ನೇ** | 10 ನಿ | **ಜೀವನ ವಿಜ್ಞಾನ : ಹವ್ಯಾಸ** | ಚಿತ್ರಗಳಿಗೆ ಬಣ್ಣ ಹಾಕುವ ಕಲೆಯನ್ನು ಬೆಳೆಸುವುದು. | ವೃತ್ತಪತ್ರಿಕೆ ಮತ್ತು ದಿನಪತ್ರಿಕೆಗಳಲ್ಲಿರುವ ಚಿತ್ರಗಳು | ಶಿಕ್ಷಕರು | ವೃತ್ತಪತ್ರಿಕೆ ಮತ್ತು ದಿನಪತ್ರಿಕೆಗಳಲ್ಲಿ ಬರುವ ಬಣ್ಣ ತುಂಬದ ಚಿತ್ರಗಳನ್ನು ಕತ್ತರಿಸಿ ತಂದು ಅವುಗಳಿಗೆ ಬಣ್ಣ ತುಂಬಲು ಮಾರ್ಗದರ್ಶನ ನೀಡುವರು. | **ಗಣಿತ : ಕೋನಗಳ ರಚನೆ ಮತ್ತು ವಿಧಗಳು** | * ಬೇರೆ ಬೇರೆ ಅಳತೆಯ ವಿಶಾಲ ಕೋನಗಳನ್ನು ಕೋನ ಮಾಪಕದ ಸಹಾಯದಿಂದ ರಚಿಸುವುದು. | ಕೋನಮಾಪಕ, ಸ್ಕೇಲು | ಶಿಕ್ಷಕರು | ಲಂಬಕೋನ ರಚನೆಯನ್ನು ತಿಳಿಸುವರು. |
| | 30 ನಿ | | | | ಹಿರೇಮಣಿ | ಶಿಕ್ಷಕರು ಕೊಟ್ಟ ಸಲಹೆಯಂತೆ ಚಿತ್ರಗಳಿಗೆ ಬಣ್ಣ ಹಾಕುವರು. | | | | ಶಿಕ್ಷಕರು | ಕೋನಮಾಪಕದ ಸಹಾಯದಿಂದ $110^0$, $140^0$, $130^0$, $150^0$ ಕೋನಗಳನ್ನು ರಚಿಸಲು ಹೇಳಿಕೊಡುವರು. |
| | 40 ನಿ | **ಸಾ. ಉ. ಉ. ಕಾ.<br>ತೆಂಗಿನ ಗರಿಯಲ್ಲಿ ಗಿರಗಿಟ್ಲೆ ಮಾಡಿಸುವುದು.** | * ಸೃಜನಶೀಲತೆ ಬೆಳೆಸುವುದು. | ತೆಂಗಿನ ಗರಿ, ಕಡ್ಡಿ | ಶಿಕ್ಷಕರು | ತೆಂಗಿನ ಗರಿಯನ್ನು ತೆಗೆದುಕೊಂಡು ಅದರಲ್ಲಿ ಗಿರಗಿಟ್ಲೆ ಮಾಡಿಸುವರು.<br>**ವಿಧಾನ :–** ಎರಡು ಸಮವಾಗಿರುವ ತೆಂಗಿನ ಗರಿಗಳನ್ನು ತೆಗೆದುಕೊಂಡು ಅವೆರಡನ್ನೂ ಸಮವಾಗಿ + ಆಕಾರದಲ್ಲಿ ಹಿಡಿದ ಒಂದರ ಮೇಲೊಂದು ಮಡಚಿ ಒಂದು ಮಡಿಕೆಯಲ್ಲಿ ಮತ್ತೊಂದು ಗರಿಯನ್ನು ಮಡಕೆ ಒಳಗೆ ಬರುವಂತೆ ತೂರಿಸಿ ಭದ್ರಪಡಿಸುವುದು. ನಂತರ ಮಧ್ಯದಲ್ಲಿ ಕಡ್ಡಿ ಚುಚ್ಚಿ ಗಿರಗಿಟ್ಲೆ ತಿರುಗುವಂತೆ ಮಾಡಿಸುವರು. | **ಕೇಳಿ – ಕಲಿ** | | | | ----ಕೇಳಿ–ಕಲಿ ಪಾಠವನ್ನು ಕೇಳಿಸುವರು ---- |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 15 ನಿ | ಗಣಿತ<br>ಸಂಕಲನ ಮತ್ತು ವ್ಯವಕಲನ | * ದಶಕವಿಲ್ಲದಂತೆ 50ಕ್ಕೆ ಮೀರದ ಸಂಖ್ಯೆಗಳ ಸಂಕಲನ ವ್ಯವಕಲನಗಳನ್ನು ಒಳಗೊಂಡ ನಿತ್ಯ ಜೀವನದ ಸಮಸ್ಯೆಗಳನ್ನು ಒಂದೇ ಹಂತದಲ್ಲಿ ಬಿಡಿಸುವುದು. | ಸಂಖ್ಯೆಗಳ ಮಿಂಚುಪಟ್ಟಿ<br>ಬೀಜಗಳು<br>ಕಲ್ಲುಗಳು<br>ಕಡ್ಡಿಗಳು | ಶಿಕ್ಷಕರು | **ಕಳೆಯುವ ಆಟ :** 5 - 2, 10 - 3, 1 - 1, 14 - 1, 14 - 2, 15 - 1<br>1 9 7 0 4<br>6 10 11 2 8<br>3 14 13 12 5<br>ಈ ರೀತಿಯಲ್ಲಿ ಮಿಂಚುಪಟ್ಟಿಗಳನ್ನು ತಯಾರಿಸಿಕೊಂಡು, ಒಂದೊಂದು ಕಾರ್ಡ್ ಎತ್ತಿ ಲೆಕ್ಕಾಚಾರ ಮಾಡಿ ಸರಿ ಉತ್ತರದ ಮೇಲೆ ಕಲ್ಲು ಇಡುವುದು. ತಪ್ಪು ಉತ್ತರದ ಮೇಲೆ ಕಲ್ಲು ಇಟ್ಟಾಗ ಉಳಿದ ಮಕ್ಕಳು ಸರಿ, ತಪ್ಪು, ಮೌಲ್ಯಮಾಪನ ಮಾಡುತ್ತಾ ಆಟ ಮುಂದುವರೆಸುವರು. | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ. | | | | |
| | 25 ನಿ | | | | ಶಿಕ್ಷಕರು | ಪಠ್ಯಪುಸ್ತಕದ ಪುಟಸಂಖ್ಯೆ 72 ಮತ್ತು 73ರಲ್ಲಿ ಇರುವ "ಎಷ್ಟು ಸುಲಭ" ಚಟುವಟಿಕೆಯನ್ನು ಕಲಿಕಾ ಸಾಮಗ್ರಿಗಳನ್ನು ಬಳಸಿಕೊಂಡು ಸುಲಭವಾಗಿ ಮಕ್ಕಳಿಗೆ ತಿಳಿಸಿಕೊಡುವರು. | | | | | |
| | 40 ನಿ | ಕೇಳಿ – ಕಲಿ ರೇಡಿಯೋ ಕಾರ್ಯಕ್ರಮ | | | | | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4ನೇ | 20 ನಿ | **ಪರಿಸರ ಅಧ್ಯಯನ**<br>**ವಸ್ತುಗಳ ಗುಣಗಳು ಮತ್ತು ಸ್ಥಿತಿಗಳು** | * ನಮ್ಮ ಸುತ್ತಲಿನ ವಸ್ತುಗಳನ್ನು ಗುಣಗಳ ಆಧಾರದ ಮೇಲೆ ಗುರುತಿಸುವರು.<br>* ವಸ್ತುಗಳ ಮೂರು ಸ್ಥಿತಿಗಳನ್ನು ತಿಳಿಯುವರು.<br>ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ವಸ್ತು ಬದಲಾಗಬಲ್ಲದು ಎಂಬುದನ್ನು ಅರಿಯುವರು. | ಮಂಜುಗಡ್ಡೆ<br>ಪಾತ್ರೆ<br>ಮದ್ಯಸಾರ<br>ದೀಪ<br>ಬೆಂಕಿಪೆಟ್ಟಿಗೆ | ಶಿಕ್ಷಕರು | ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಅವರಿಗೆ ಹೂವು, ಹಣ್ಣು ತರಕಾರಿ ಆಟದ ರೀತಿಯಲ್ಲಿ ಘನ, ದ್ರವ, ಅನಿಲ ಆಟ ಆಡಿಸುವರು.<br>ಘನ ಹೇಳಿದಾಗ ಅದಕ್ಕೆ ಉದಾ : ಕಲ್ಲು<br>ದ್ರವ ಹೇಳಿದಾಗ ಅದಕ್ಕೆ ಉದಾ : ನೀರು<br>ಅನಿಲ ಹೇಳಿದಾಗ ಅದಕ್ಕೆ ಉದಾ : ಗಾಳಿ<br>ಬೇರೆ ಉದಾ : ಹೇಳಿದವರು ಸೋತಂತೆ. ಇದೇ ಆಟ ಮುಂದುವರಿಸುವರು. | | | | | 5ನೇ ತರಗತಿಯ ನಾಲ್ಕನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ. |
| | 50 ನಿ | | | | ಶಿಕ್ಷಕರು | **ಸ್ಥಿತಿ ಬದಲಾವಣೆ :**<br>ತಮ್ಮ ಶಾಲಾಸನ್ನಿವೇಶದಲ್ಲಿ ಮಂಜುಗಡ್ಡೆ (ಪೀಸ್) ಸಿಕ್ಕರೆ ಈ ಸ್ಥಿತಿ ಬದಲಾವಣೆಯನ್ನು ಸರಳ ಪ್ರಯೋಗದ ಮೂಲಕವಾಗಿ ಸವಿವರವಾಗಿ ವಿವರಿಸುವರು.<br>ನಂತರ ಪಠ್ಯದಲ್ಲಿರುವ "ನೆನಪಿಡು", "ನಿನಗಿದು ಗೊತ್ತೆ" ? ಚಟುವಟಿಕೆಗಳನ್ನು ಸ್ಪಷ್ಟವಾಗಿ ವಿವರಿಸುವರು. | | | | | |
| | 10 ನಿ | | | | ಶಿಕ್ಷಕರು | ಪಠ್ಯದ ಮುಖ್ಯಾಂಶಗಳು ಪುನರಾವರ್ತನೆಯಾಗಲು ಪೂರಕವಾಗುವಂತೆ ಸರಳ ಪ್ರಶ್ನೆಗಳನ್ನು ಕೇಳುವ ಮೂಲಕ ವಿದ್ಯಾರ್ಥಿಗಳ ಮೌಲ್ಯಮಾಪನ ಮಾಡುವರು. | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 40 ನಿ | **ಕನ್ನಡ : ಗಗನಗುಡಿ ಪುನರಾವರ್ತನೆ** | * ಪದ್ಯವನ್ನು ಆಲಿಸಿದ ನಂತರ ಏಕೆ? ಏನು? ಎಂಬ ಪ್ರಶ್ನೆಗಳಿಗೆ ಉತ್ತರಿಸುವರು. | | ಶಿಕ್ಷಕರು | ಗಗನಗುಡಿ ಪದ್ಯದ ಸಾರಾಂಶವನ್ನು ಹೇಳಿ ಈ ಸಾರಾಂಶಕ್ಕೆ ಸಂಬಂಧಿಸಿದಂತೆ ಏಕೆ? ಏನು? ಎಂಬ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು.<br>ಶಿಕ್ಷಕರು ಕೇಳಿದ ಪ್ರಶ್ನೆಗಳಿಗೆ ಮಕ್ಕಳು ಉತ್ತರಿಸುವರು. | **ಕನ್ನಡ : ಜಲಪಾತ ಪುನರಾವರ್ತನೆ** | * ಅಪರಿಚಿತ ಸನ್ನಿವೇಶಗಳನ್ನು ಸಂಭಾಷಣೆ ಸಂವಾದ ಚರ್ಚೆಗಳ ಮೂಲಕ ಅರ್ಥ ಮಾಡಿಕೊಳ್ಳುವುದು. | ಪ್ರಶ್ನಾವಳಿ ಕಾರ್ಡ್‌ಗಳು | ಹಿರೇಮಣಿ | ಜಲಪಾತ ಪಾಠದ ಅಭ್ಯಾಸವನ್ನು ಪುನರಾವರ್ತನೆ ಮಾಡಲು ಸೂಚಿಸುವುದು.<br>* ಪ್ರಶ್ನೋತ್ತರ<br>* ಸ್ವಂತ ವಾಕ್ಯದಲ್ಲಿ ಬರೆಯಿರಿ. |
| | 40 ನಿ | **ಕನ್ನಡ : ಅಕ್ಕನಿಗೊಂದು ಪತ್ರ** | * ಬೇರೆ ಮಕ್ಕಳ ಬರವಣಿಗೆಯನ್ನು ಓದುವುದು. | ಸರಳ ವಾಕ್ಯಗಳ ಮಿಂಚುಪಟ್ಟಿ | ಹಿರೇಮಣಿ | ಪ್ರತಿಯೊಂದು ಮಗುವಿಗೂ ಮೂರು ಅಥವಾ ನಾಲ್ಕು ಸರಳ ವಾಕ್ಯಗಳನ್ನು ಬರೆದ ಮಿಂಚುಪಟ್ಟಿಯನ್ನು ಕೊಟ್ಟು ಮಕ್ಕಳಿಂದ ಬರೆಸಿ ಮಕ್ಕಳು ಬರೆದ ವಾಕ್ಯಗಳನ್ನು ಅದಲು ಬದಲು ಮಾಡಿ ಓದಿಸುವರು. | **ಜೀವನ ವಿಜ್ಞಾನ : ವಿನಯ** | * ವಿನಯವನ್ನು ಮಕ್ಕಳಲ್ಲಿ ಬೆಳೆಸುವುದು. | ಗ್ರಂಥಾಲಯದ ಪುಸ್ತಕ | ಶಿಕ್ಷಕರು | ಎರಡು ಗಿಳಿಗಳ ಕಥೆಯನ್ನು ಹೇಳುತ್ತಾ ಒಂದು ಗಿಳಿ ಕಳ್ಳರಿಗೆ ಸಹಾಯ ಮಾಡುತ್ತಾ ಅವರಿಗೆ ಹೊಂದಿಕೊಂಡಿರುತ್ತದೆ. ಆದರೆ ಆಶ್ರಮದ ಗಿಳಿ ಅತಿಥಿಗಳನ್ನು ಸತ್ಕರಿಸುವ ವಿಧಾನವನ್ನು ವಿವರಿಸುತ್ತಾ ಮಕ್ಕಳಲ್ಲಿ ವಿನಯವನ್ನು ಹೇಗೆ ತೋರಿಸಬೇಕು ಎಂಬುದನ್ನು ತಿಳಿಸುವರು.<br>**ಸೂಚನೆ :** ಶಿಕ್ಷಕರು ವಿನಯಕ್ಕೆ ಸಂಬಂಧಿಸಿದ ಕಥೆ ಹೇಳುವುದು. |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯಗಳು | ಬಳಸಬೇಕಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯಗಳು | ಬಳಸಬೇಕಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2ನೇ | 10 ನಿ | ಗಣಿತ<br>ವ್ಯವಕಲನ ಮತ್ತು ಸಂಕಲನ | * ವ್ಯವಹಾರಿಕ ಸಂಕಲನ ಮತ್ತು ವ್ಯವಕಲನ ಲೆಕ್ಕಗಳನ್ನು ಮಾಡುವ ಕೌಶಲ ಬೆಳೆಸುವುದು. | ಲೆಕ್ಕದ ಮಿಂಚುಪಟ್ಟಿಗಳು | ಹಿರೇಮಣಿ | ಹಿಂದಿನ ಅವಧಿಯಲ್ಲಿ ಬೋಧಿಸಲಾದ ಕೆಲವು ಲೆಕ್ಕಗಳನ್ನು ಬಿಡಿಸಲು ಹೇಳುವರು. | ಗಣಿತ<br>ಕೋನಗಳ ವಿಧಗಳು ಮತ್ತು ರಚನೆ | * ಲಘುಕೋನ, ವಿಶಾಲ ಕೋನಗಳನ್ನು ಕೋನಮಾಪಕ ಹಾಗೂ ಸ್ಕೇಲುಗಳ ಸಹಾಯದಿಂದ ಬಿಡಿಸುವ ಸಾಮರ್ಥ್ಯ (ಕೌಶಲ) ಬೆಳೆಸುವುದು. | ಕೈವಾರ, ಕೋನಮಾಪಕ, ಸ್ಕೇಲು | ಶಿಕ್ಷಕರು | ಪಠ್ಯಪುಸ್ತಕದ ಪುಟ ಸಂಖ್ಯೆ 63, 64 ರಲ್ಲಿರುವ ಲೆಕ್ಕಗಳನ್ನು ಬಿಡಿಸಲು ತಿಳಿಸುವರು. |
| | 30 ನಿ | | | | ಶಿಕ್ಷಕರು | ಪಠ್ಯಪುಸ್ತಕದ ಪುಟಸಂಖ್ಯೆ 75ರಲ್ಲಿರುವ ತಾಳೆ ನೋಡುವುದನ್ನು ಕಲಿಕೆ ಚಟುವಟಿಕೆಯ ಅಡಿಯಲ್ಲಿರುವ ಮಾದರಿ ಲೆಕ್ಕ $48 - 12 = 36$, $36 + 12 = 48$ ಈ ರೀತಿಯ ಲೆಕ್ಕಗಳನ್ನು ಮಾಡಿಸುವರು. ಬೇರೆ ಉದಾಹರಣೆ ಮೂಲಕ ಸಾಮರ್ಥ್ಯಕ್ಕೆ ಪೂರಕ ಮಾದರಿ ಲೆಕ್ಕಗಳನ್ನು ಮಾಡಿಸುವರು. | | | | ಹಿರೇಮಣಿ | ಮಕ್ಕಳು ಪಠ್ಯಪುಸ್ತಕದಲ್ಲಿರುವ (ಅಭ್ಯಾಸ 3.1) ಲೆಕ್ಕಗಳನ್ನು ಹಿರೇಮಣಿಯ ಮಾರ್ಗದರ್ಶನದಲ್ಲಿ ಮಾಡುವರು. |
| | 10 ನಿ | | | | ಹಿರೇಮಣಿ | ತಾಳೆ ನೋಡುವ ಲೆಕ್ಕಗಳನ್ನು ಮಾಡುವರು. ನಂತರ 74ನೇ ಪುಟದಲ್ಲಿರುವ ಲೆಕ್ಕ ಮಾಡುವರು. | | | | ಶಿಕ್ಷಕರು | ಕಸದ ಬುಟ್ಟಿ ತಯಾರಿಕೆಗೆ ಬೇಕಾದ ಸಾಮಗ್ರಿ ಕೊಟ್ಟ ಮಾದರಿಯಾಗಿ ಒಂದನ್ನು ಮಾಡಿ ತೋರಿಸುವರು. |
| | 30 ನಿ | | | ಕಲ್ಲುಗಳು, ಕಡ್ಡಿಗಳು, ಸ್ಥಾನಬೆಲೆ ಕೋಷ್ಟಕ | ಶಿಕ್ಷಕರು | ಮಕ್ಕಳು ಮಾಡಿದ ಅಭ್ಯಾಸದ ಲೆಕ್ಕಗಳನ್ನು ಪರಿಶೀಲಿಸುವರು ನಂತರ ತಪ್ಪಿದ್ದಲ್ಲಿ ಪರಿಹಾರ ನೀಡುವರು. | ಸಾ.ಉ.ಉ.ಕಾ – ಸ್ವಚ್ಛತೆ | ಅನುಪಯುಕ್ತ ವಸ್ತುಗಳ ಸದ್ಬಳಕೆ ಬಗ್ಗೆ ಅರಿಯುವರು. | ರಟ್ಟಿನಪಟ್ಟಿ, ಡ್ರಾಯಿಂಗ್ ಶೀಟ್, ಸ್ಕೆಚ್ ಪೆನ್, ಅಂಟು. | ಹಿರೇಮಣಿ | ತರಗತಿಯಲ್ಲಿರುವ ಮಕ್ಕಳನ್ನು ಸಂಖ್ಯೆಗಳಿಗೆ ಅನುಗುಣವಾಗಿ ಗುಂಪು ಮಾಡಿ ಕಸದಬುಟ್ಟಿ ತಯಾರಿಕೆಗೆ ಬೇಕಾದ ಸಾಮಗ್ರಿಗಳನ್ನು ನೀಡಿ ತಯಾರಿಸಲು ತಿಳಿಸುವರು. ಮಕ್ಕಳು ತಯಾರಿಸುವರು. |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಘಟಕದ ಹೆಸರು | ಕಲಿಕಾ ಫಲಗಳು | ಬೋಧನೋಪಕರಣ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಕಲಿಕಾ ಫಲಗಳು | ಬೋಧನೋಪಕರಣ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **3ನೇ** | 15 ನಿ | **ಪರಿಸರ ಅಧ್ಯಯನ**<br>**ವಸ್ತುಗಳ ಗುಣಗಳು ಮತ್ತು ಸ್ಥಿತಿಗಳು** | * ನಮ್ಮ ಸುತ್ತಲಿನ ವಸ್ತುಗಳನ್ನು ಗುಣಗಳ ಆಧಾರದ ಮೇಲೆ ಗುರುತಿಸುವರು.<br>* ವಸ್ತುಗಳ ಮೂರು ಸ್ಥಿತಿಗಳನ್ನು ತಿಳಿಯುವರು.<br>* ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ವಸ್ತು ಬದಲಾಗುವುದು ಎಂಬುದನ್ನು ಅರಿಯುವರು. | ಪ್ರಶ್ನಾವಳಿ ಕಾರ್ಡ್‌ಗಳು | ಶಿಕ್ಷಕರು | **ಪೂರ್ವ ಸಿದ್ಧತಾ ಚಟುವಟಿಕೆ :**<br>**ಪುರ್ ಪುರ್ ಆಟ :**<br>ಮಕ್ಕಳನ್ನು ವೃತ್ತಾಕಾರದಲ್ಲಿ ನಿಲ್ಲಿಸಿ ಹಕ್ಕಿಗಳ ಹೆಸರು ಹೇಳಿದಾಗ ಪುರ್ ಪುರ್ ಎಂದು ಪ್ರಾಣಿಗಳ ಹೆಸರು ಹೇಳಿದಾಗ ಸುಮ್ಮನಿರಬೇಕು. ಇದಕ್ಕೆ ತದ್ವಿರುದ್ಧವಾಗಿ ಹೇಳಿದ ಮಗು ಆಟದಿಂದ ಹೊರಗೆ ಎಂಬ ಸೂಚನೆ ನೀಡಿ ಆಟ, ಮುಂದುವರೆಸುವರು. | | | | | |
| | 25 ನಿ | | | | | ಮಕ್ಕಳನ್ನು 5 ಗುಂಪುಗಳನ್ನಾಗಿ ಮಾಡಿ ಪ್ರತಿ ಗುಂಪಿಗೂ ತಿಳಿ–ಕಲಿ ಚಟುವಟಿಕೆಯ 'ಈ ಪ್ರಶ್ನೆಗಳಿಗೆ ಉತ್ತರಿಸು' ಇಲ್ಲಿ ಬರುವ ಪ್ರತಿ ಪ್ರಶ್ನೆಯನ್ನು ಪ್ರತಿ ಗುಂಪಿಗೂ ನೀಡಿ ಚರ್ಚೆಯ ಮೂಲಕ ಆ ಪ್ರಶ್ನೆಗಳಿಗೆ ಉತ್ತರಿಸುವಂತೆ ಮಕ್ಕಳಿಗೆ ತಿಳಿಸುವರು.<br>**ಸೂಚನೆ :** ಪಠ್ಯಪುಸ್ತಕದ ಪುಟಸಂಖ್ಯೆ 59ನ್ನು ನೋಡಿ. | | | | | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ |
| | 40 ನಿ | | | | | ಈಗಾಗಲೇ ಮಕ್ಕಳು ಮೇಲಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳನ್ನು ಕ್ರೋಢೀಕರಿಸಿ ತಪ್ಪಿದನ್ನು ತಿದ್ದುತ್ತಾ ಕಪ್ಪು ಹಲಗೆಯ ಮೇಲೆ ಸ್ಪಷ್ಟ ಉತ್ತರವನ್ನು ಬರೆಯಿಸುತ್ತಾ ಮೌಲ್ಯಮಾಪನ ಕ್ರಿಯೆಯನ್ನು ಪೂರ್ಣಗೊಳಿಸುವರು. | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4ನೇ | 30 ನಿ | ಸಾ. ಉ. ಉ. ಕಾ.<br>ಸುಂದರವಾದ ಚಿತ್ರಗಳ ರಚನೆ | * ಪರಿಸರದಲ್ಲಿನ ಎಲೆ, ಹೂ, ಪಕ್ಷಿಯ ಗರಿಗಳಿಂದ ಸುಂದರವಾದ ಚಿತ್ರಗಳನ್ನು ರಚಿಸುವರು. | * ವಿವಿಧ ರೀತಿ ಎಲೆಗಳು<br>* ಹೂಗಳು<br>* ಪಕ್ಷಿಗಳ ಗರಿಗಳು<br>* ಡ್ರಾಯಿಂಗ್ ಶೀಟ್ಸ್<br>* ಗೋಂದು | ಶಿಕ್ಷಕರು | ಈಗಾಗಲೇ ಮಕ್ಕಳಿಂದ ಸಂಗ್ರಹಿಸಿರುವ ಎಲೆಗಳನ್ನು ಕೂಡಿಹಾಕಿ ಒಂದು ನಿರ್ದಿಷ್ಟ ಅಳತೆಯ ಡ್ರಾಯಿಂಗ್ ಕಾಗದ ತೆಗೆದುಕೊಂಡು ಒಂದು ದೊಡ್ಡ ಎಲೆ ತೆಗೆದುಕೊಂಡು ಕಾಗದದ ಮಧ್ಯಭಾಗಕ್ಕೆ ಅಂಟಿಸುವುದು. ನಂತರ 2 ಅಥವಾ 3 ಅಥವಾ 4 ಎಲೆಗಳಿಂದ ನಮಗೆ ಬೇಕಾದ ರೀತಿಯಲ್ಲಿ ಅಂಟಿಸುತ್ತಾ ಪಕ್ಷಿ, ಹಣ್ಣು, ಹೂ ಹೀಗೆ ನಮಗೆ ಬೇಕಾದಂತಹ ಸುಲಭ ಚಿತ್ರಗಳನ್ನು ರಚಿಸಬಹುದಾಗಿದೆ.<br>ಮಾದರಿ : ಪಕ್ಷಿ<br> | | | | | |
| | 50 ನಿ | | | | ಶಿಕ್ಷಕರು | ಮೇಲೆ ತಿಳಿಸದ ರೀತಿಯಲ್ಲಿ ಶಿಕ್ಷಕರು ತಮ್ಮ ನೇತೃತ್ವದಲ್ಲಿ ಈಗಾಗಲೇ ಸಂಗ್ರಹಿಸಿದಂತಹ ವಸ್ತುಗಳಿಂದ ವಿವಿಧ ಬಗೆಯ ಚಿತ್ರಗಳನ್ನು ರಚಿಸಿ ತರಗತಿಯಲ್ಲಿ ಪ್ರದರ್ಶನ ಮಾಡಿಸುವರು. | | | | | |

5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ.

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 40 ನಿ | ಕನ್ನಡ<br>ಅಕ್ಕನಿಗೊಂದು ಪತ್ರ ಪುನರಾವರ್ತನೆ | * ಬೇರೆ ಮಕ್ಕಳ ಬರಹಗಳನ್ನು ಓದುವುದು. | | ಶಿಕ್ಷಕರ | ಮಕ್ಕಳಿಗೆ ಗ್ರಂಥಾಲಯದ ಪುಸ್ತಕಗಳನ್ನು ಕೊಟ್ಟು ಪುಸ್ತಕದಲ್ಲಿರುವ ಸಣ್ಣ ಕಥೆಗಳನ್ನು ಬರೆಯಲು ಹೇಳುವರು.<br>ನಂತರ ಬರೆದ ಕಥೆಯನ್ನು ಈವರೆಗೂ ಯಾರ ಕೈಬರಹವನ್ನು ಓದಿಲ್ಲವೋ ಅಂತಹ ಮಕ್ಕಳ ಕೈ ಬರಹವನ್ನು ಕೊಟ್ಟು ಓದಲು ತಿಳಿಸುವುದು... | ಕನ್ನಡ<br>ನಮ್ಮ ಕನಸು (ಪುನರಾವರ್ತಿತ) | * ಸನ್ನಿವೇಶ ಮತ್ತು ಘಟನೆಗಳನ್ನು ವಿವರಿಸುವುದು. | ಸಂತೆ<br>ಜಾತ್ರೆ<br>ಚಿತ್ರಪಟ | ಹಿರೇಮಣಿ | ಮಕ್ಕಳಿಗೆ ತಿಳಿದಿರುವ ಸಂತೆ, ಜಾತ್ರೆ ಈ ರೀತಿಯ ಘಟನೆಗಳ ಬಗ್ಗೆ ಚರ್ಚಿಸಲು ಅಥವ ಆ ಘಟನೆಯ ಬಗ್ಗೆ ವಿವರಿಸುವರು.<br>ಮಧ್ಯೆ ಮಧ್ಯೆ ಸರಳ ಪ್ರಶ್ನೆಗಳನ್ನು ಕೇಳುವರು. |
| | 40 ನಿ | ಕನ್ನಡ<br>ಜೇನು ಪುನರಾವರ್ತನೆ | * ಸರಳ ಮಾರ್ಗದರ್ಶಿತ ರಚನೆಗಳನ್ನು ಬರೆಯುವುದು. | ಪದಬಂಧದ ಮಿಂಚುಪಟ್ಟಿ | ಶಿಕ್ಷಕರು | ಮಕ್ಕಳ ಸಂಖ್ಯೆಗನುಗುಣವಾಗಿ ಗುಂಪುಗಳನ್ನು ಮಾಡಿ ಪ್ರತಿ ಗುಂಪಿಗೂ ಒಂದೊಂದು "ಪದಬಂಧ"ವನ್ನು ರಚಿಸಿ ಅದಕ್ಕೆ ತಕ್ಕಂತೆ ಕೆಲವು ಸೂಚನೆಗಳನ್ನು ಕೊಡುವುದು.<br>ಸೂಚನೆಗಳನ್ನು ಆಧಾರವಾಗಿಟ್ಟುಕೊಂಡು ಪದಬಂಧವನ್ನು ಪೂರ್ಣಗೊಳಿಸುವರು.<br>**ಸೂಚನೆ** : ಪದಬಂಧ ರಚಿಸಲು ಪಠ್ಯಪುಸ್ತಕದ ಪುಟಸಂಖ್ಯೆ 45ನ್ನು ನೋಡುವರು. | "ಜೀವನ ವಿಜ್ಞಾನ"<br>ನಾಡಗೀತೆಯನ್ನು ಹಾಡುವುದನ್ನು ಕಲಿಸುವುದು. | ಭಾವೈಕ್ಯತೆ ಮನೋಭಾವ ಬೆಳೆಸುವುದು. | ನಾಡಗೀತೆ<br>ಬರೆದ<br>ಚಾರ್ಟ್ಸ್ | ಹಿರೇಮಣಿ | ಮಕ್ಕಳಿಗೆ ರಾಗವಾಗಿ ತಪ್ಪಿಲ್ಲದೆ ಸ್ವರಭಾರ ಏರಿಳಿತದೊಂದಿಗೆ ನಾಡಗೀತೆಯನ್ನು ಹಾಡುವರು. |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯಗಳು | ಬಳಸುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯಗಳು | ಬಳಸುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2ನೇ | 10 ನಿ | ಪರಿಸರ ಅಧ್ಯಯನ : ವಸ್ತುಗಳ ಗುಣಗಳು ಮತ್ತು ಸ್ಥಿತಿಗಳು | * ನಮ್ಮ ಸುತ್ತಲಿನ ವಸ್ತುಗಳನ್ನು ಗುಣಗಳ ಆಧಾರದ ಮೇಲೆ ಗುರುತಿಸುವರು.<br>* ವಸ್ತುಗಳ ಮೂರು ಸ್ಥಿತಿಗಳನ್ನು ತಿಳಿಯುವರು.<br>* ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ವಸ್ತು ಬದಲಾಗುವುದನ್ನು ಅರಿಯುವರು. | | ಶಿಕ್ಷಕರು | ಪಠ್ಯಪುಸ್ತಕದ ಪುಟಸಂಖ್ಯೆ 60 ರಲ್ಲಿರುವ "ಆ", "ಇ", "ಈ" ಈ ಚಟುವಟಿಕೆಗಳ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಿ ನೀಟಾಗಿ ಬರೆಯುವಂತೆ ತಿಳಿಸುವರು. | ಗಣಿತ<br>ಕೋನಗಳ ವರ್ಗಗಳು ಮತ್ತು ರಚನೆ | * ಬೇರೆ ಬೇರೆ ಅಳತೆಯ ವಿಶಾಲ ಕೋನಗಳನ್ನು ಕೋನ ಮಾಪಕದ ಸಹಾಯದಿಂದ ರಚಿಸುವ ಸಾಮರ್ಥ್ಯಗಳಿಸುವರು.<br>* ಉದಾಹರಣೆಗಳನ್ನು ಸರಾಗವಾಗಿ ಮತ್ತು ವಿವರವಾಗಿ ಉಪಯೋಗಿಸುವ ಸಾಮರ್ಥ್ಯ | | ಹಿರೇಮಣಿ | ಅಭ್ಯಾಸ 3.1ರಲ್ಲಿರುವ ಚಟುವಟಿಕೆಗಳಲ್ಲಿಯ ಲೆಕ್ಕಗಳನ್ನು ಬಿಡಿಸಲು ಮಕ್ಕಳಿಗೆ ಸಹಾಯ ಮಾಡುವರು. |
| | 30 ನಿ | | | | ಹಿರೇಮಣಿ | ಮಕ್ಕಳು ಪಠ್ಯಪುಸ್ತಕದ ಪುಟಸಂಖ್ಯೆ 60ರಲ್ಲಿಯ<br>ಆ) ಬಿಟ್ಟ ಸ್ಥಳವನ್ನು ಸೂಕ್ತಪದದಿಂದ ತುಂಬುವರು.<br>ಇ) ಘನ, ದ್ರವ ಹಾಗೂ ಅನಿಲ ವಸ್ತುಗಳಾಗಿ ವಿಂಗಡಿಸುವಂತೆ ತಿಳಿಸುವರು.<br>ಈ) ಘನ, ದ್ರವ ಹಾಗೂ ಅನಿಲ ವಸ್ತುಗಳ ಗುಣ ಬರೆಯಲು ತಿಳಿಸುವರು. | | | | ಶಿಕ್ಷಕರು | ಪಠ್ಯಪುಸ್ತಕದ ಪುಟಸಂಖ್ಯೆ 65 ಹಾಗೂ 66ರಲ್ಲಿಯ ಅಭ್ಯಾಸ ಲೆಕ್ಕಗಳನ್ನು ಬೋರ್ಡಿನ ಮೇಲೆ ಬಿಡಿಸುವರು. ಕೆಲವು ಲೆಕ್ಕಗಳನ್ನು ಮಕ್ಕಳಿಂದ ಮಾಡಿಸುವರು. |
| | 20 ನಿ | | | | ಶಿಕ್ಷಕರು | ಮಕ್ಕಳು ಬರೆದ ಉತ್ತರಗಳನ್ನು ಪರಿಶೀಲಿಸಿ ತಪ್ಪಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವರು. | | | | | ಉದ್ಘಾಟನಾ ಸಮಾರಂಭಕ್ಕೆ ಪೂರ್ವಸಿದ್ಧತೆ ಮಾಡುವರು. |
| | 20 ನಿ | | | | ಹಿರೇಮಣಿ | ತಪ್ಪಿದ ಉತ್ತರಗಳನ್ನು ಸರಿಪಡಿಸಿ ಬರೆಯುವರು. | ಯೋಜನೆ : ಜೀವ ಶಾಸ್ತ್ರ ಪರಿಚಯ ಸಮಗ್ರ ಸಂಚಿಕೆ | * ಮಕ್ಕಳಲ್ಲಿ ಸಂಗ್ರಹಣಾ ಮನೋಭಾವನೆ ಬೆಳೆಸುವುದು. | ಸಂಚಿಕೆ ಬಿಡುಗಡೆ | ಶಿಕ್ಷಕರು | ಶಾಲಾ ಮುಖ್ಯೋಪಾಧ್ಯಾಯರಿಂದ ಸಂಚಿಕೆಯನ್ನು ಬಿಡುಗಡೆಗೊಳಿಸಲಾಗುವುದು. |

| | | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 40 ನಿ | ಸಾ.ಉ.ಉ.ಕಾ<br>ಗುಲಾಬಿ ಹೂ ತಯಾರಿಕೆ | * ಕಾಗದದಿಂದ ಗುಲಾಬಿ ಹೂ ತಯಾರಿಸುವರು. | * ಬಣ್ಣದ ಕಾಗದ<br>* ತಂತಿ<br>* ಕತ್ತರಿ<br>* ದಾರ<br>* ಗೋಂದು | ಶಿಕ್ಷಕರು | ಮಕ್ಕಳನ್ನು ವೃತ್ತಾಕಾರದಲ್ಲಿ ಕೂರಿಸಿಕೊಂಡು ಮೊದಲು ಬಣ್ಣದ ಕಾಗದದಿಂದ ಹೂವಿನ ದಳಗಳನ್ನು ಕತ್ತರಿಸಿ ನಂತರ ಹಸಿರು ಬಣ್ಣದ ಕಾಗದದಿಂದ 2 ಎಲೆಗಳನ್ನು ಕತ್ತರಿಸಿಕೊಂಡು ನಂತರ ತಂತಿ ತೆಗೆದುಕೊಂಡು ಅದಕ್ಕೆ ಈ ಮೊದಲೇ ತಯಾರಿಸಿದಂತಹ ಹೂವಿನದಳಗಳನ್ನು ತಂತಿಯ ತುದಿಗಿಟ್ಟ ಅದರ ಕೆಳಗೆ ಎಲೆಗಳನ್ನು ದಾರದಿಂದ ಕಟ್ಟಿದರೆ ಗುಲಾಬಿ ಹೂ ತಯಾರು ಮಾಡಿದಂತಾಗುತ್ತದೆ. ಈ ಕ್ರಮವನ್ನು ಮಕ್ಕಳಿಗೆ ತಿಳಿಸಿಕೊಡುವರು. | | | | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ. | |
| | 40 ನಿ | | | ಕೇಳಿ-ಕಲಿ ರೇಡಿಯೋ ಕಾರ್ಯಕ್ರಮ | ಶಿಕ್ಷಕರು | | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಉಪ ಘಟಕ | ಕಲಿಕಾ ಉದ್ದೇಶ | ಬೋಧನಾ ಕಲಿಕೋಪಕರಣಗಳು | ಸಂಪನ್ಮೂಲ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಉಪ ಘಟಕ | ಕಲಿಕಾ ಉದ್ದೇಶ | ಬೋಧನಾ ಕಲಿಕೋಪಕರಣಗಳು | ಸಂಪನ್ಮೂಲ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4ನೇ | 40 ನಿ | ಕಾ.ಅ.ಅ.ಕಾ<br>ಗುಲಾಬಿ ಹೂ ತಯಾರಿಕೆ | * ಕಾಗದದಿಂದ ಗುಲಾಬಿ ಹೂ ತಯಾರಿಸುವರು. | * ಬಣ್ಣದ ಕಾಗದ<br>* ತಂತಿ<br>* ಕತ್ತರಿ<br>* ದಾರ<br>* ಗೋಂದು | ಶಿಕ್ಷಕರು | ಈ ಹಿಂದಿನ ಅವಧಿಯಲ್ಲಿ ಶಿಕ್ಷಕರು ಗುಲಾಬಿ ಹೂ ತಯಾರಿಸಿ ತೋರಿಸುವರು.<br>ಅದೇ ರೀತಿ ಶಿಕ್ಷಕರ ಮಾರ್ಗದರ್ಶನದಲ್ಲಿ ಅವರ ಸೂಚನೆಯಂತೆ ಗುಲಾಬಿ ಹೂ ತಯಾರಿಸುವರು ನಂತರ ತರಗತಿಯಲ್ಲಿ ಪ್ರದರ್ಶಿಸುವರು. | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ. | | | | |
| | 40 ನಿ | ನೈತಿಕ ಶಿಕ್ಷಣ | * ಮಕ್ಕಳು ಹಿರಿಯರೊಂದಿಗೆ ಸ್ನೇಹಿತರೊಂದಿಗೆ ಮತ್ತು ಸಮಾಜದ ಇತರ ಸದಸ್ಯರೊಂದಿಗೆ ವಿನಯದಿಂದ ವರ್ತಿಸುವುದನ್ನು ರೂಢಿಸಿಕೊಳ್ಳುವರು. | ಕಥೆಯನ್ನು ಸೂಚಿಸುವ ಚಿತ್ರಪಟಗಳು | ಶಿಕ್ಷಕರು | ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿ ಮಕ್ಕಳಲ್ಲಿ ವಿನಯ ಮತ್ತು ವಿಧೇಯತೆಯನ್ನು ಬೆಳೆಸುವಂತಹ ಕಥೆಗಳನ್ನು ಹೇಳುವುದು ಮತ್ತು ಅದರಲ್ಲಿನ ಉತ್ತಮ ಅಂಶಗಳನ್ನು (ನೀತಿ) ಮಕ್ಕಳೊಂದಿಗೆ ನೇರ ಮಾತುಗಳಲ್ಲಿ ಚರ್ಚಿಸುವರು.<br>**ಉದಾ :** ಋಷಿ ಮತ್ತು ದರೋಡೆಕೋರ | | | | | |
| 1ನೇ ಅವಧಿ | ೬೬ನೇ ದಿನ<br>40 ನಿ | | | | | ----------- 1ನೇ ತರಗತಿಯಿಂದ 5ನೇ ತರಗತಿಯವರೆಗೆ ಸಾಮೂಹಿಕ ಕವಾಯಿತು ----------- | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಕಲಿಕಾ ಫಲಗಳು | ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಕಲಿಕಾ ಫಲಗಳು | ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2ನೇ ಅವಧಿ | 10 ನಿ | ಕನ್ನಡ<br>ಜೇನು ಹುಳುಗಳು | * ಸರಳ ಮಾರ್ಗದರ್ಶಿತ ರಚನೆಗಳನ್ನು ಬರೆಯುವರು. | | ಶಿಕ್ಷಕರು | ಅಭ್ಯಾಸದ ಚಟುವಟಿಕೆಯಲ್ಲಿರುವ ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಕೇಳುವರು. ನಂತರ ಅಭ್ಯಾಸ ಚಟುವಟಿಕೆಯಲ್ಲಿರುವ ಜೇನಿನ ಉಪಯೋಗದ ಬಗ್ಗೆ ಮತ್ತು ಭಾಷಾ ಚಟುವಟಿಕೆಯಲ್ಲಿರುವ "ಈ ಹುಳುಗಳು ಕಟ್ಟುವ ಮನೆಯನ್ನು ಹೆಸರಿಸಿ ಬರೆಯಿರಿ" ಚಟುವಟಿಕೆಗಳನ್ನು ಮಾಡಲು ತಿಳಿಸುವರು. | ಕನ್ನಡ<br>ನನ್ನ ಕನಸು. ಪುನರಾವರ್ತನೆ | * ಸನ್ನಿವೇಶ ಮತ್ತು ಘಟನೆಗಳನ್ನು ವಿವರಿಸುವರು. | | ಹಿರೇಮಣಿ | ಈ ಗದ್ಯಭಾಗದಲ್ಲಿ ಬರುವ ಎಲ್ಲಾ ಅಭ್ಯಾಸ ಚಟುವಟಿಕೆಗಳನ್ನು ಶಿಕ್ಷಕರು ಪುನರಾವರ್ತಿಸುವರು. |
| | 30 ನಿ | | | | ಹಿರೇಮಣಿ | ಶಿಕ್ಷಕರು ಹೇಳಿದ ಸೂಚನೆಯಂತೆ ಬರೆಯುವರು. | | | | ಶಿಕ್ಷಕರು | ಮಕ್ಕಳಿಗೆ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುತ್ತಾ ಕೆಲವು ಸನ್ನಿವೇಶ (ಆ ಪ್ರಶ್ನೆಗೆ ಸಂಬಂಧಿಸಿದ)ಗಳನ್ನು ವಿವರಿಸುವರು. |
| | 40 ನಿ | ಕನ್ನಡ<br>ಉಪಾಯ ಬಲ್ಲವನಿಗೆ ಅಪಾಯವಿಲ್ಲ | ಸೂಕ್ತ ಏರಿಳಿತದೊಂದಿಗೆ ಅಭಿನಯದ ಮೂಲಕ ಸರಳ ಕಥೆಗಳನ್ನು ವಾಚಿಸುವರು | | ಶಿಕ್ಷಕರು | ಮಕ್ಕಳನ್ನು ಎರಡು ಗುಂಪುಗಳಾಗಿ ಮಾಡುವರು. ಒಂದು ಗುಂಪಿನವರು ಒಂದು ಪದವನ್ನು ಹೇಳುವರು. ಇನ್ನೊಂದು ಗುಂಪಿನವರು ಆ ಪದವನ್ನು ಉಪಯೋಗಿಸಿಕೊಂಡು ಒಂದು ವಾಕ್ಯವನ್ನು ಹೇಳುವರು. ಇದೇ ರೀತಿ ಚಟುವಟಿಕೆಯನ್ನು ಮುಂದುವರೆಸುವರು. | ಗಣಿತ<br>ಕೋನಗಳ ವಿಧಗಳು ಮತ್ತು ರಚನೆ | * ವಿಶ್ಲೇಷಣೆಯೊಂದಿಗೆ ಅಳತೆಮಾನಗಳನ್ನು ಕೋನಗಳ ಮಾಪನದಲ್ಲಿ ಪ್ರಯೋಗಿಸುವರು. | * ಪ್ರಶ್ನೆಪತ್ರಿಕೆ<br>* ಜ್ಯಾಮಿತ್ರಿ ಪೆಟ್ಟಿಗೆ | ಹಿರೇಮಣಿ | : ಘಟಕ ಪರೀಕ್ಷೆ :<br>ಈ ಘಟಕಕ್ಕೆ ಸಂಬಂಧಿಸಿದಂತೆ ಕೆಲವು ಪ್ರಶ್ನೆಗಳನ್ನು ಮತ್ತು ಕೋನಗಳ ರಚನೆಗಳನ್ನು ಕೊಟ್ಟು ಬರೆಯಲು ಹೇಳುವರು.<br>ಶಿಕ್ಷಕರು ಕೊಟ್ಟ ಪ್ರಶ್ನೆ ಪತ್ರಿಕೆಗೆ ಉತ್ತರಿಸುವರು. |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ ಅವಧಿ | 30 ನಿ | ಸಾ.ಉ.ಉ.ಕಾ<br>ಹರ್ಬಲ್ ಹಲ್ಲುಪುಡಿ ತಯಾರಿಕೆ | * ಹರ್ಬಲ್ ಹಲ್ಲುಪುಡಿಯನ್ನು ತಯಾರಿಸುವರು.<br>* ಹಲ್ಲುಪುಡಿ ಬಳಸಿ ಹಲ್ಲುಜ್ಜುವ ಅಭ್ಯಾಸ ಬೆಳೆಸಿಕೊಳ್ಳುವರು. | * ಬೇವಿನ ಎಲೆ<br>* ಇದ್ದಿಲು ಪುಡಿ<br>* ಕರಿಮೆಣಸಿನ ಪುಡಿ<br>* ಲವಂಗದ ಪುಡಿ<br>* ಉಪ್ಪಿನ ಪುಡಿ | ಶಿಕ್ಷಕರು | ಹಿಂದಿನ ದಿನ ಶಿಕ್ಷಕರು ಮಕ್ಕಳಿಗೆ ಹರ್ಬಲ್ ಹಲ್ಲುಪುಡಿ ತಯಾರಿಕೆ ಮಾಡುವ ಬಗ್ಗೆ ಮಾಹಿತಿ ನೀಡಿರುತ್ತಾರೆ. ಅದರಂತೆ ವಿದ್ಯಾರ್ಥಿಗಳನ್ನು ವೃತ್ತಾಕಾರವಾಗಿ ಕೂರಿಸಿಕೊಂಡು ಹಲ್ಲುಪುಡಿ ತಯಾರಿಸಲು ಬೇಕಾಗುವ ವಸ್ತುಗಳೆಲ್ಲವನ್ನು ಸಿದ್ಧಪಡಿಸಿ ಇಟ್ಟುಕೊಳ್ಳುವರು ಮಾಡುವ ವಿಧಾನವನ್ನು ಮಕ್ಕಳಿಗೆ ವಿವರವಾಗಿ ತಿಳಿಸುವರು. | 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ. | | | | |
| | 50 ನಿ | | | | | ನಂತರ ಶಿಕ್ಷಕರು ಮಕ್ಕಳ ಸಹಕಾರದೊಂದಿಗೆ ಪ್ರಾಯೋಗಿಕವಾಗಿ ಹರ್ಬಲ್ ಹಲ್ಲುಪುಡಿಯನ್ನು ತಯಾರಿಸಿ ತೋರಿಸುವರು.<br>**ಮಾಡುವ ವಿಧಾನ :**<br>ಬೇವಿನ ಎಲೆ, ಇದ್ದಿಲು ಪುಡಿಯನ್ನು ಒಂದು ಪಾತ್ರೆಗೆ ಹಾಕಿ, ಕರಿಮೆಣಸಿನಪುಡಿ, ಲವಂಗದಪುಡಿ ಮತ್ತು ಉಪ್ಪನ್ನು ಸೇರಿಸಿ ಬೆರಸಿ ಹಲ್ಲುಪುಡಿಯನ್ನು ತಯಾರಿಸಿ ಡಬ್ಬಿಯಲ್ಲಿ ತುಂಬಿ ಪ್ರತಿದಿನ ಬಳಸುವಂತೆ ತಿಳಿಸುವರು.<br>(**ಪ್ರಮಾಣ :** ಬೇವಿನ ಎಲೆ, ಇದ್ದಿಲುಪುಡಿ 4 ಲೋಟ, ಕರಿಮೆಣಸಿನಪುಡಿ 1 ಟೀ ಸ್ಪೂನ್, ಲವಂಗದ ಪುಡಿ 1/2 ಟೀ ಸ್ಪೂನ್, ಉಪ್ಪು 4 ಟೀ ಸ್ಪೂನ್) | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ ಅವಧಿ | 10 ನಿ | ಕನ್ನಡ ಬಾವಿಯಲ್ಲಿ ಚಂದ್ರ : ಪುನರಾರ್ವನೆ | * ಒಗಟುಗಳನ್ನು ಸಂಗ್ರಹಿಸುವುದು ಮತ್ತು ಬಿಡಿಸುವುದು. | | ಹಿರೇಮಣಿ | ಮಕ್ಕಳಿಗೆ ಕೆಲವು ಗಾದೆಗಳನ್ನು ಸಂಗ್ರಹಿಸಿ ಬರೆಯಲು ಹೇಳುವುದು. | ಕನ್ನಡ : ಆಡಿ ನಲಿಯೋಣ. ಪುನರಾವರ್ತನೆ | * ಗುಂಪು ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರಲು ಮೌಖಿಕ ಸೂಚನೆಗಳನ್ನು ಅರ್ಥಮಾಡಿಕೊಳ್ಳುವುದು. | | ಶಿಕ್ಷಕರು | ಅಳಗುಣಿ ಮಣೆ ಆಟ, ಉಪ್ಪಿನಮನೆ ಆಟದ ನಿಯಮಗಳನ್ನು ಶಿಕ್ಷಕರು ಹೇಳುವುದು. |
| | 30 ನಿ | | | | ಶಿಕ್ಷಕರು | ಸಂಗ್ರಹಿಸಿದ ಗಾದೆಗಳನ್ನು ಬಿಡಿಸಲು ತಿಳಿಸುವರು. **ಸೂಚನೆ** : ಮಕ್ಕಳ ಸಂಖ್ಯೆಗೆ ಅನುಗುಣವಾಗಿ ತಂಡಗಳನ್ನು ರಚಿಸುವುದು. | | | | ಹಿರೇಮಣಿ | ಶಿಕ್ಷಕರು ಹೇಳಿದ ನಿಯಮಾನುಸಾರ ಮಕ್ಕಳು ಆಟಗಳನ್ನು ಆಡುವರು. |
| | 40 ನಿ | | | | ಶಿಕ್ಷಕರು | ಹೊಸ ಪದಗಳನ್ನು ಕೊಟ್ಟು ಅವುಗಳಿಗೆ ಅರ್ಥ ಬರೆಯುವುದು ಮತ್ತು ವಿರುದ್ಧ ಪದಗಳನ್ನು ಬರೆಯುವರು. | | | | ಹಿರೇಮಣಿ | ನಂತರ ಮೇಲೆ ತಿಳಿಸಲಾದ ಆಟಗಳ ನಿಯಮಗಳನ್ನು ಬರೆಸುವುದು. |
| 2ನೇ ಅವಧಿ | 10 ನಿ | ಜೀವನ ವಿಜ್ಞಾನ : ಸೌಂದರ್ಯೋಪಾಸನೆ | * ಸುತ್ತಲಿನ ಭೌಗೋಳಿಕ ಲಕ್ಷಣಗಳಾದ ಕಾಡು, ಬೆಟ್ಟ, ಕಣಿವೆ, ಜಲಪಾತ, ಸಮುದ್ರ ಕರಾವಳಿ ಇವುಗಳನ್ನು ಗುರುತಿಸುವರು. | * ಕಾಗದ<br>* ಕ್ರೆಯಾನ್<br>* ಪೆನ್ಸಿಲ್<br>* ಅಳತೆಪಟ್ಟಿ | ಹಿರೇಮಣಿ | ಶಿಕ್ಷಕರು ತಾವು ನೋಡಿರುವ ಸುತ್ತಮುತ್ತಲ ಪರಿಸರದಲ್ಲಿ ಕಾಣುವ ಬೆಟ್ಟ, ಕಾಡು, ಕಣಿವೆ, ಜಲಪಾತ ಇತ್ಯಾದಿ ಚಿತ್ರಗಳನ್ನು ಬಿಡಿಸಲು ಹೇಳುವರು. | ಗಣಿತ : ಕೋನಗಳು ವಿಧಗಳು ಮತ್ತು ರಚನೆ | * ಬೇರೆ ಬೇರೆ ಅಳತೆಯ ವಿಶಾಲ ಕೋನಗಳನ್ನು ಕೋನಮಾಪಕದ ಸಹಾಯದಿಂದ ರಚಿಸಿರುವ ಮತ್ತು ಉಪಕರಣಗಳನ್ನು ಸರಾಗವಾಗಿ ಮತ್ತು ನಿಖರವಾಗಿ ಉಪಯೋಗಿಸುವ ಸಾಮರ್ಥ್ಯ ಗಳಿಸುವರು. | ಜ್ಯಾಮಿತಿ ಪೆಟ್ಟಿಗೆ | ಶಿಕ್ಷಕರು | **ಪರಿಹಾರ ಬೋಧನೆ**<br>ಹಿಂದಿನ ಅವಧಿಯಲ್ಲಿ ಮಾಡಿದ ಘಟಕ ಪರೀಕ್ಷೆಯಲ್ಲಿ, ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಪರಿಹಾರ ಬೋಧನೆ ಕಾರ್ಯ ಕೈಗೊಳ್ಳುವರು. |
| | 30 ನಿ | | | | ಹಿರೇಮಣಿ | ಶಿಕ್ಷಕರ ಸೂಚನೆಯಂತೆ ಮಕ್ಕಳು ಹಿರೇಮಣಿಯ ನೇತೃತ್ವದಲ್ಲಿ ಚಿತ್ರಗಳನ್ನು ಬಿಡಿಸುವರು. | | | | | |
| | 40 ನಿ | | | | ಶಿಕ್ಷಕರು | ಈಗಾಗಲೇ ಮಕ್ಕಳು ಬಿಡಿಸಿರುವ ಚಿತ್ರಗಳನ್ನು ವೀಕ್ಷಿಸಿ ನಂತರ ಮಕ್ಕಳಿಗೆ ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಕಾಣಸಿಗುವ ಸೌಂದರ್ಯ ಸವಿಯಲು ಮತ್ತು ಪರಿಸರ ಸೌಂದರ್ಯದ ಮಹತ್ವ ಅದರಿಂದ ಮನಸ್ಸಿಗಾಗುವ ಉಲ್ಲಾಸ, ಆನಂದ, ಆಹ್ಲಾದಗಳ ಬಗ್ಗೆ ತಿಳಿಸಿಕೊಡುವರು. | | | | | ಕೇಳಿ-ಕಲಿ ರೇಡಿಯೋ ಕಾರ್ಯಕ್ರಮ |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ ಅವಧಿ | 20 ನಿ | ಗಣಿತ<br>ಸಂಕಲನ ಮತ್ತು ವ್ಯವಕಲನ | * ದಶಕವಿಲ್ಲದಂತೆ 50ಕ್ಕೆ ಮೀರದ ಸಂಖ್ಯೆಗಳ ಸಂಕಲನ ವ್ಯವಕಲನಗಳನ್ನು ಒಳಗೊಂಡ ನಿತ್ಯಜೀವನದ ಸಮಸ್ಯೆಗಳನ್ನು ಒಂದೇ ಹಂತದಲ್ಲಿ ಬಿಡಿಸುವುದು. | ಮಕ್ಕಳು ಮತ್ತು ಮಿಂಚು ಪಟ್ಟಿಗಳು | ಶಿಕ್ಷಕರು | ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ 'ಕೋತಿ ಮತ್ತು ಬಾಳೆಹಣ್ಣಿನ ಆಟ' ಆಡಿಸುವರು. (ಆಟದ ಪರಿಚಯವಿಲ್ಲದವರು ಚೈತನ್ಯ–1 ಕೈಪಿಡಿಯಲ್ಲಿ ಪುಟ ಸಂಖ್ಯೆ 178 ಆಟದ ವಿಧಾನಗಳನ್ನು ತಿಳಿಯುವುದು). | | | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ | | |
| | 30 ನಿ | | | | ಶಿಕ್ಷಕರು | ಪಠ್ಯಪುಸ್ತಕದ ಪುಟಸಂಖ್ಯೆ 75ರಲ್ಲಿನ ಸಂಕಲನ ಮತ್ತು ವ್ಯವಕಲನದ ಸಮಸ್ಯೆಗಳನ್ನು ಬಿಡಿಸುವರು.<br>1) 36 + 12 = 48<br>– 36<br>= 12 | | | | | |
| | 30 ನಿ | | | ಚಪ್ಪಟೆ ಕಲ್ಲುಗಳು | ಶಿಕ್ಷಕರು | ನಂತರ ಪುಟಸಂಖ್ಯೆ 76ರಲ್ಲಿ ಬರುವಂತಹ 'ಮಾಡಿನಲಿ' ಯಲ್ಲಿನ 'ಕುಂಟೋಬಿಲ್ಲೆ' ಆಟವನ್ನು ಆಡಿಸುವುದರ ಮೂಲಕ ಪಠ್ಯದ ಮುಖ್ಯಾಂಶಗಳ ಪುನರಾವರ್ತನೆಗೆ ಸಹಕಾರಿ ಆಗುವರು. | | | | | |

| ಅವಧಿ | ಸಮಯ ಹಂಚಿಕೆ | ಮೂರನೇ ತರಗತಿ<br>ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ<br>ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4ನೇ ಅವಧಿ | 20 ನಿ | ಪರಿಸರ ಅಧ್ಯಯನ<br>ವಸ್ತುಗಳ ಗುಣಗಳು ಮತ್ತು ಸ್ಥಿತಿಗಳು | – ನಮ್ಮ ಸುತ್ತಲಿನ ವಸ್ತುಗಳ ಗುಣಗಳ ಆಧಾರದ ಮೇಲೆ ಗುರುತಿಸುವುದು.<br>– ವಸ್ತುಗಳ ಮೂರು ಸ್ಥಿತಿಗಳನ್ನು ತಿಳಿಯುವರು.<br>– ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ವಸ್ತು ಬದಲಾಗಬಲ್ಲದು ಎಂಬುದನ್ನು ಅರಿಯುವರು. | * ಅಭಿನಯ ಗೀತೆ<br>* ಡಬ್ಬ<br>* ಪೆಟ್ರೋಲ್<br>* ಕರ್ಪೂರ<br>* ನುಸಿಗುಳಿಗೆ | ಶಿಕ್ಷಕರು | ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿಕೊಂಡು<br>ತೋಟ....ತೋಟ.....<br>ಎಂತಹ ತೋಟ !<br>ಮಲ್ಲಿಗೆ ತೋಟ..<br>ಎಂತಹ ಮಲ್ಲಿಗೆ...... ಇದೇ ರೀತಿ ಮುಂದುವರಿಸುವುದು.<br>ಎಂಬ ಅಭಿನಯ ಗೀತೆಯನ್ನು ಹೇಳಿಕೊಡುವರು. | | | | | 5ನೇ ತರಗತಿಯು 4ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ |
| | 30 ನಿ | | | | | ನಂತರ ಪಠ್ಯಪುಸ್ತಕದ ಪುಟಸಂಖ್ಯೆ 60ರಲ್ಲಿ ಇರುವಂತಹ ಚಟುವಟಿಕೆಯನ್ನು ಮಾಡಿಸುವ ಮೂಲಕ ವಸ್ತುಗಳ ಗುಣಗಳು ಮತ್ತು ಸ್ಥಿತಿ ಬದಲಾವಣೆಯ ಬಗ್ಗೆ ತಿಳಿಸಿ ಕೊಡುವರು. | | | | | |
| | 30 ನಿ | | | | | ಪುನಃ ಮತ್ತೊಮ್ಮೆ ಪಠ್ಯದ ಮುಖ್ಯಾಂಶಗಳು ಪುನರಾವರ್ತನೆಯಾಗಲು ಪೂರಕವಾಗುವಂತೆ ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಕೇಳುತ್ತಾ ವಸ್ತುಗಳ ಗುಣಗಳು ಮತ್ತು ಸ್ಥಿತಿಗಳು ಪಠ್ಯಭಾಗದ ಬಗ್ಗೆ ಸಂಕ್ಷಿಪ್ತವಾಗಿ ಚರ್ಚಿಸುವರು. | | | | | |